ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಜುಲೈ 2016 ಮಾಸ ಪತ್ರಿಕೆ

ಸಂಪುಟ : 38
ಸಂಚಿಕೆ : 10
ಪುಟ : 12
ಬೆಲೆ : ₹ 10/–

## ರಕ್ಷಾಬಂಧನ

ಸ್ನೇಹ ಮತ್ತು ರಕ್ಷೆಯದ್ಯೋತಕ





ರಾಷ್ಟ್ರಾರಾಧಕ ಗೋಪಾಲ ಕೃಷ್ಣ ಗೋಖಲೆ 6



ಮಹಾತ್ಮರ ತಿಲಕಪ್ರಾಯ ಬಾಲಗಂಗಾಧರ ತಿಲಕ್ 8

A Journal of Karnataka State Secondary Teachers' Association

# ಸಂಪಾದಕೀಯ

"ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ" ಎಂದು ದಾಸವರೇಣ್ಯ ಪುರಂದರದಾಸರು ಹಾಡುವ ಮೂಲಕ ಸಮಾಜದಲ್ಲಿ 'ಗುರು'ವಿನ ಮಹತ್ವವನ್ನು ಸಾರಿದ್ದಾರೆ. 'ಗು'ಕಾರಶ್ಚಾಂಧಕಾರಸ್ತು 'ರು'ಕಾರಃ ತನ್ನಿರೋಧಕಮ್ ಎಂಬ ಉಕ್ತಿಯು ಗುರುವು ಮಾಡುವ, ಮಾಡಬೇಕಾದ ಶ್ರೇಷ್ಠ ಕಾರ್ಯಗಳನ್ನು ಪ್ರಸುತ ಪಡಿಸುತ್ತದೆ. ಒಟ್ಟಾರೆ ಭಾರತೀಯ ಸಮಾಜದಲ್ಲಿ ಪ್ರಾಚೀನ ಕಾಲದಿಂದಲೂ ಗುರುವಿಗೆ ವಿಶಿಷ್ಟ ಸ್ಥಾನವಿರುವುದು ಸರ್ವವಿದಿತ. ಬದಲಾದ ಇಂದಿನ ಪರಿಸ್ಥಿತಿಯಲ್ಲಿ ಶಿಕ್ಷಕರಿಗೆ ಆ ಸ್ಥಾನವಿದೆಯೇ ? ಈ ಪ್ರಶ್ನೆಗೆ ಉತ್ತರ ಹೌದು, ಇಲ್ಲ ಎರಡೂ. ಹಿಂದೆ ಆದರ್ಶ ಶಿಕ್ಷಕರು ಇದ್ದು ತಮ್ಮ ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗಾಗಿ ಮನಃಪೂರ್ವಕವಾಗಿ ಬೋಧಿಸುತ್ತಿದ್ದರು ಎಂಬ ಮಾತನ್ನು ಕೇಳಿದ್ದೇವೆ. ಇಂದು ಅಂತಹ ಆದರ್ಶ ಶಿಕ್ಷಕರ ಪ್ರಮಾಣ ಕಡಮೆಯಾದರೂ ಎಲೆ ಮರೆಯ ಕಾಯಿಯಂತೆ ಹಲವಾರು ಶಿಕ್ಷಕರು ಸಮಾಜಕ್ಕೆ, ವಿದ್ಯಾರ್ಥಿವೃಂದಕ್ಕೆ ಆದರ್ಶಪ್ರಾಯರಾಗಿದ್ದಾರೆ. ಹಾಗಾದರೆ ಎಲ್ಲಾ 'ಗುರು'ಗಳನ್ನು ಸ್ಮರಿಸಿ, ಗೌರವಿಸುವ ದಿನ ಯಾವುದು ಎಂದರೆ ಥಟ್ಟನೆ ಅಂತ ನೆನಪಾಗುವುದು ಸೆಪ್ಟೆಂಬರ್ 5. ಹೌದು, ಅಂದು ಶಿಕ್ಷಕರ ದಿನವೇ. ಈ ಆಚರಣೆ ಕೇವಲ ಕೆಲವು ದಶಕಗಳಿಂದ ಮಾತ್ರ. ಆದರೆ ನಮ್ಮ ಋಷಿ ಮುನಿಗಳೆಲ್ಲ ಗುರುಗಳೇ. ಅವರಲ್ಲಿ ಗುರುಶ್ರೇಷ್ಠರು ವೇದವ್ಯಾಸರು. ಆದ್ದರಿಂದಲೇ ಅವರನ್ನು ಗೌರವಿಸಲು ಪ್ರತಿ ವರ್ಷ ಆಷಾಢ ಶುದ್ಧ ಪೌರ್ಣಿಮೆಯನ್ನು "ಗುರುಪೂರ್ಣಿಮೆ"ಯಾಗಿ ಆಚರಿಸಿ ಎಲ್ಲಾ ಗುರುಗಳನ್ನೂ ವಂದಿಸುವ ಪದ್ಧತಿ ಅನಾದಿ ಕಾಲದಿಂದಲೂ ನಡೆದು ಬಂದಿದೆ. ಈ ವರ್ಷ ಜುಲೈ 19ರಂದು ಗುರುಪೂರ್ಣಿಮೆ. ಅಂದು ನಮ್ಮ ಶಾಲೆಗಳಲ್ಲಿ ಗುರು ಪೌರ್ಣಮಿಯನ್ನು ಶಿಕ್ಷಕರ ದಿನಾಚರಣೆಯಾಗಿ ಆಚರಿಸುವುದರ ಮೂಲಕ 'ಗುರುವಂದನೆ' ಸಲ್ಲಿಸೋಣ.

ಬ್ರಿಟಿಷರು ಭಾರತಕ್ಕೆ ಬಂದು ಅವರ ಛಾಪನ್ನು ಎಲ್ಲಾ ರಂಗಗಳಲ್ಲೂ ಭಾರತೀಯರ ಮೇಲೆ ಮೂಡಿಸಿದರು. ಆದರೆ ಪಾಶ್ಚಾತ್ಯ ವಿದ್ವಾಂಸರನೇಕರು ಭಾರತೀಯ ಭಾಷೆಗಳನ್ನು ಕಲಿತು, ಆ ಭಾಷೆಗಳಲ್ಲಿ ಪಾಂಡಿತ್ಯವನ್ನು ಗಳಿಸಿ ಸಾಹಿತ್ಯ, ಶಾಸ್ತ್ರ ಗ್ರಂಥಗಳನ್ನೂ ರಚಿಸಿದರು. ಕನ್ನಡ ಭಾಷೆಗೂ ಹಲವಾರು ಪಾಶ್ಚಾತ್ಯ ವಿದ್ವಾಂಸರು ತಮ್ಮ ಅಮೂಲ್ಯ ಕಾಣಿಕೆಗಳನ್ನು ನೀಡಿದ್ದಾರೆ. ಅವರಲ್ಲಿ ಪ್ರಾತಃಸ್ಮರಣೀಯರು ಬಿ.ಎಲ್. ರೈಸ್, ಕಿಟೆಲ್ ಮುಂತಾದವರು. ಬಿ.ಎಲ್. ರೈಸ್‌ರವರು ಜನಿಸಿದ್ದು, ಮರಣಿಸಿದ್ದು ಜುಲೈ ತಿಂಗಳಿನಲ್ಲಿ. ಅಂತೆಯೇ ಕನ್ನಡ ನಾಡು – ನುಡಿಗಾಗಿ ಶ್ರಮಿಸಿದ ಸಾಹಿತಿಗಳೆಂದರೆ ವಿಶೇಷವಾಗಿ ಆಲೂರು ವೆಂಕಟರಾಯರು, ಟಿ.ಪಿ. ಕೈಲಾಸಂ, ಅನಕೃ, ಫ. ಗು. ಹಳಕಟ್ಟಿ, ದೇ.ಜವರೇಗೌಡ, ರಂ.ಶ್ರೀ. ಮುಗಳಿ, ತ್ರಿವೇಣಿ ಮುಂತಾದವರು. ಇವರೆಲ್ಲರನ್ನೂ ಸ್ಮರಿಸುವ ತಿಂಗಳು ಜುಲೈ. ಅವರ ಸಾಹಿತ್ಯವನ್ನು ಓದುವುದರ ಮೂಲಕ ಗೌರವವನ್ನು ಸಲ್ಲಿಸೋಣ.

ಭಾರತೀಯ ಭಾಷೆಗಳಲ್ಲಿ ಅತ್ಯಂತ ಪ್ರಾಚೀನವಾದುದು ಸಂಸ್ಕೃತ. ಇದು ದೇವಭಾಷೆಯೂ ಹೌದು. ವೇದ, ಉಪನಿಷತ್ತು, ಪುರಾಣ, ಶಾಸ್ತ್ರ ಗ್ರಂಥಗಳು, ಮಹಾಕಾವ್ಯಗಳು ರಚಿತವಾಗಿರುವುದು ಸಂಸ್ಕೃತದಲ್ಲಿಯೇ. ಅತ್ಯುತ್ಕೃಷ್ಟ ಸಾಹಿತ್ಯ ಸಂಸ್ಕೃತದಲ್ಲಿ ರಚನೆಯಾಗಿರುವುದು ಸರ್ವವಿದಿತ. ಇಂತಹ ಶ್ರೇಷ್ಠ ಭಾಷೆ ಈಗ ಜನಮನದಿಂದ ದೂರವಾಗುತ್ತಿರುವುದು ಖೇದದ ಸಂಗತಿ. ಸಂಸ್ಕೃತವನ್ನು ಮತ್ತೆ ಜನಮನದಲ್ಲಿ ನೆಲೆಸುವಂತೆ ಮಾಡಲು ಅನೇಕ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ. ಸಂಸ್ಕೃತದ ಮಹತ್ವವನ್ನು ನೆನಪಿಸಲು ಆಗಸ್ಟ್ 18ರಂದು ಸಂಸ್ಕೃತ ದಿನವನ್ನು ಈ ವರ್ಷ ಆಚರಿಸಲಾಗುತ್ತದೆ. ಸಂಸ್ಕೃತದ ಮರು ಜನಪ್ರಿಯತೆಗಾಗಿ ಎಲ್ಲರೂ ಕೈ ಜೋಡಿಸೋಣ.

ಸಂಪಾದಕರು

## ಸೂಕ್ತಿ



**ಧ್ಯಾಯಸ್ವ ಸತತಂ ವತ್ಸ ಸಪರ್ಯಾಂ ನಿತ್ಯಶಃ ಕುರು ।**
**ಮಾನಸೇನಾಥ ಪುಷ್ಪೈರ್ವಾ ಪ್ರಣವೇನ ಸಮಾಹಿತಃ ॥**

"ದೇವ – ಗುರು – ಉತ್ತಮರ ಪೂಜೆಗೆ ಸುಗಂಧಭರಿತ ಮಲ್ಲಿಗೆ, ಸಂಪಿಗೆ ಇತ್ಯಾದಿ ಬಾಹ್ಯ ಪುಷ್ಪಗಳಿದ್ದರೂ ಇವುಗಳಿಗಿಂತ ಮಹಾಚೇತನರು ಇಷ್ಟಪಡುವ ಎಂಟು ಅಪೂರ್ವ ಭಾವಪುಷ್ಪಗಳಿವೆ. ಅಹಿಂಸೆ, ಇಂದ್ರಿಯನಿಗ್ರಹ, ಸರ್ವಭೂತದಯೆ, ಕ್ಷಮೆ, ಯಥಾರ್ಥಜ್ಞಾನ, ತಪಸ್ಸು, ಸತ್ಯ, ಧ್ಯಾನ ಇವುಗಳನ್ನು ಸಮರ್ಪಿಸುವ ಜತೆಗೆ ಓಂಕಾರವಿದ್ದರೆ ಮನುಜರ ಸಂಸಾರವು ಪರಮಾನಂದದ ಸಾರವಾಗುತ್ತದೆ. ಗುರುವು ಶಿಷ್ಯನಿಗೆ ಈ ಪ್ರಮೇಯವನ್ನು ಸಾರರೂಪವಾಗಿ ಬೋಧಿಸಬೇಕು".

- ಶ್ರೀಯುತ ಪ್ರಣವಕಲ್ಪ

## ಪರಿವಿಡಿ


- ಸಂಸ್ಕೃತ ದೀಪ ಬೆಳಗಲಿ 3
- ವಿಜ್ಞಾನ ಮತ್ತು ತಂತ್ರಜ್ಞಾನದ ಸ್ವರೂಪ 4
- ಸ್ನೇಹ 5
- ರಾಷ್ಟ್ರಾರಾಧಕ ಗೋಪಾಲ ಕೃಷ್ಣ ಗೋಖಲೆ 6
- ಮಹಾತ್ಮರ ತಿಲಕಪ್ರಾಯ – ಬಾಲಗಂಗಾಧರ ತಿಲಕ್ 8
- ಬಾ ಬಾಲೆ ಶಾಲೆಗೆ 9
- ಪದಬಂಧ 10
- ಯೋಗಶಿಕ್ಷಣ ತರಬೇತಿ 11

# ಸಂಸ್ಕೃತ ದೀಪ ಬೆಳಗಲಿ

## (ಸಂಸ್ಕೃತ ದಿನಾಚರಣೆಯ ನಿಮಿತ್ತ ವಿಶೇಷ ಲೇಖನ

**ಸತ್ಯನಾರಾಯಣ ಭಟ್ಟ**
ಅಖಿಲ ಭಾರತ ಸಂಪರ್ಕ ಪ್ರಮುಖ
ಸಂಸ್ಕೃತ ಭಾರತಿ, ಗಿರಿನಗರ

ಮನೆಯೇ ಮೊದಲ ಪಾಠಶಾಲೆ. ತಾಯಿಯೇ ಮೊದಲ ಗುರು ಎನ್ನುವುದು ನಮ್ಮಲ್ಲಿ ಅನಾದಿ ಕಾಲದಿಂದ ಇರುವ ನಂಬಿಕೆ. ಇದು ಬರೆ ನಂಬಿಕೆ ಮಾತ್ರವಾಗಿರದೆ, ಪರಂಪರೆಯಿಂದ ಅವಿಚ್ಛಿನ್ನವಾಗಿ ನಡೆದುಕೊಂಡು ಬಂದಿದೆ ಕೂಡ. ಮಾತೃದೇವೋ ಭವ, ಪಿತೃದೇವೋ ಭವ, ಅತಿಥಿ ದೇವೋ ಭವ, ಆಚಾರ್ಯ ದೇವೋ ಭವ, ಶ್ರದ್ಧಯಾ ದೇಯಂ, ಅಶ್ರದ್ಧಯಾ ಅದೇಯಂ ಇತ್ಯಾದಿ ಉಪನಿಷತ್ ವಿಚಾರಗಳನ್ನು ಮತ್ತು ಅಮರಕೋಶ, ಭಗವದ್ಗೀತೆ, ಸುಭಾಷಿತಗಳನ್ನು ಮನೆ ಮನೆಗಳಲ್ಲಿ ಕಲಿಸುತ್ತಿದ್ದ ಕಾಲವೊಂದಿತ್ತು. ರಾಮಾಯಣ, ಮಹಾಭಾರತ, ಉಪನಿಷತ್ ಕಥೆಗಳ ಮೂಲಕ ಮಕ್ಕಳಲ್ಲಿ ನಮ್ಮ ಪರಂಪರೆಯ ಬಗ್ಗೆ ನಂಬಿಕೆ, ಜೀವನ ಮೌಲ್ಯಗಳ ಬಗ್ಗೆ ಶ್ರದ್ಧೆ, ಆತ್ಮವಿಶ್ವಾಸವನ್ನು ಬಾಲ್ಯದಲ್ಲಿಯೇ ತುಂಬುವ ವ್ಯವಸ್ಥೆ ಇತ್ತು. ಅವು ಸದಾಕಾಲ ಮನಸ್ಸಿನಲ್ಲಿ ಅಚ್ಚಳಿಯದೇ ಇರುತ್ತಿದ್ದವು. ಇವುಗಳೇ ಮುಂದಿನ ಜೀವನದ ದಾರಿದೀಪವಾಗುತ್ತಿದ್ದವು.

ಅಯಂ ನಿಜಃ ಪರೋವೇತಿ ಗಣನಾ ಲಘುಚೇತಸಾಮ್ । ಉದಾರಚರಿತಾನಾಂ ತು ವಸುಧೈವ ಕುಟುಂಬಕಂ (ಇವ ತನ್ನವ, ಇವ ಬೇರೆಯವ ಎಂಬ ಭಾವನೆ ಸಣ್ಣ ಮನಸ್ಸಿನವರದು. ಉದಾರ ನಡತೆಯವರಿಗೆ ಜಗತ್ತೇ ಒಂದು ಪರಿವಾರ) ಸರ್ವೇ ಭವಂತು ಸುಖಿನಃ, ಸರ್ವೇ ಸಂತು ನಿರಾಮಯಾಃ । ಸರ್ವೇ ಭದ್ರಾಣಿ ಪಶ್ಯಂತು, ಮಾ ಕಶ್ಚಿದ್ ದು:ಖಭಾಗ್ ಭವೇತ್ (ಎಲ್ಲರೂ ಸುಖವಾಗಿರಲಿ, ಎಲ್ಲರೂ ಆರೋಗ್ಯವಂತರಾಗಿ ಬಾಳಲಿ, ಸರ್ವರೂ ಒಳ್ಳೆಯದನ್ನೇ ನೋಡಲಿ, ಯಾರೊಬ್ಬರೂ ದುಃಖಿತರಾಗಬಾರದು). ಆ ನೋ ಭದ್ರಾಃ ಕ್ರತವೋ ಯಂತು ವಿಶ್ವತಃ (ವಿಶ್ವದ ಎಲ್ಲೆಡೆಯಿಂದ ಒಳ್ಳೆಯ ವಿಚಾರಗಳು ನಮ್ಮೆಡೆಗೆ ಹರಿದು ಬರಲಿ) ಭದ್ರಂ ಕರ್ಣೇಭಿಃ ಶ್ರುಣುಯಾಮ ದೇವಾಃ, ಭದ್ರಂ ಪಶ್ಯೇ ಮಾಕ್ಷಭಿಃ ಯಜತ್ರಾಃ (ಎಲ್ಲೆಡೆಯಿಂದಲೂ ನಮ್ಮ ಕಿವಿಯಿಂದ ಒಳ್ಳೆಯದನ್ನೇ ಕೇಳಲ್ಪಡಲಿ. ಎಲ್ಲೆಡೆಯೂ ಒಳ್ಳೆಯದನ್ನೇ ಕಣ್ಣಿನಿಂದ ನೋಡಲ್ಪಡಲಿ) ಮುಂತಾಗಿ ಅನೇಕ ಶ್ರೇಷ್ಠ ವೇದೋಪನಿಷತ್ ಆಧಾರಿತ ವಿಚಾರಗಳ ಮೂಲಕ ಸಾಮಾಜಿಕ ಶಿಕ್ಷಣವನ್ನು ಮಕ್ಕಳಿದ್ದಾಗಲೇ ಕಲಿಸಿಕೊಡಲಾಗುತ್ತಿತ್ತು. ಇಷ್ಟು ಮಾತ್ರವಲ್ಲದೇ ಸಮಾಜದಲ್ಲಿ ಎಲ್ಲರನ್ನೂ ಸಮಾನವಾಗಿ ನೋಡುವ ಮತ್ತು ಎಲ್ಲರ ಕಷ್ಟ ಸುಖಗಳಲ್ಲಿ ಭಾಗಿಯಾಗುವ ಸಂಸ್ಕಾರವನ್ನು, ಸಮಾಜದ ಹಿತಕ್ಕೋಸ್ಕರ ನಾವೆಲ್ಲರೂ ದುಡಿಯಬೇಕು. ಸಮಾಜದ ಹಿತದಲ್ಲಿಯೇ ನನ್ನ ಹಿತ ಮತ್ತು ವಿಕಾಸವಿದೆ ಎನ್ನುವ 'ವಸುಧೈವ ಕುಟುಂಬಕಂ' ಭಾವನೆಯನ್ನು ಬಿತ್ತಲಾಗುತ್ತಿತ್ತು. ವ್ಯಕ್ತಿ ತಾನು ಸಮಾಜಕ್ಕೆ ಭಾರವು ಕಂಟಕನು ಆಗದೆ ಸಮಾಜೋದ್ಧಾರಕನಾಗಿ ಬೆಳೆಯಬೇಕಾದರೆ ಮನೆಯ ಪಾತ್ರ ಬಹಳ ಮುಖ್ಯ. ಪ್ರಾಚೀನ ಭಾರತದಲ್ಲಿ ಈ ರೀತಿಯ ಶಿಕ್ಷಣವನ್ನು ನೀಡುತ್ತಿದ್ದ ಮನೆಗಳು ವಾಸ್ತವದಲ್ಲಿ ವಿದ್ಯಾಲಯಗಳೇ ಆಗಿದ್ದವು.

ಉಳಿದ ಭಾಷೆಗಳಂತೆ ಸಂಸ್ಕೃತ ಕೂಡ ಒಂದು ಭಾಷೆ ಮಾತ್ರ ಎನ್ನುವ ಭಾವನೆ ಅನೇಕರದ್ದು. ಆದರೆ ವಾಸ್ತವಿಕವಾಗಿ ಯೋಚಿಸಿದರೆ ಭಾರತವನ್ನು ಭಾರತವಾಗಿ ಉಳಿಸುವ, ಜಗತ್ತನ್ನು ಒಂದಾಗಿಸುವ, ಭಾರತೀಯ ಸಂಸ್ಕೃತಿಯ ಜ್ಞಾನ ಪರಂಪರೆಯ ಮೂಲವೇ ಸಂಸ್ಕೃತ. ವಿಜ್ಞಾನ-ತಂತ್ರಜ್ಞಾನವನ್ನು ತನ್ನಲ್ಲಿ ಹುದುಗಿಸಿಕೊಂಡಿರುವ ಮನೋವೈಜ್ಞಾನಿಕ ಭಾಷೆ ಕೂಡ. ಇವೆಲ್ಲವೂ ನಮ್ಮ ಅರಿವಿಗೆ ಬರಬೇಕಾದರೆ ನಾವು ನಮ್ಮ ಋಷಿ ಪರಂಪರೆಯ ಅಧ್ಯಯನವನ್ನು ಮಾಡಬೇಕು. ವೇದೋಪನಿಷತ್ ಇತ್ಯಾದಿ ಪ್ರಾಚೀನ ಜ್ಞಾನದ ಕಡೆಗೆ ಕಣ್ಣಾಡಿಸಬೇಕು. 64 ಕಲೆ, 18 ವಿದ್ಯಾಸ್ಥಾನಗಳ ಬಗ್ಗೆ ಅಲ್ಪಸ್ವಲ್ಪ ಜ್ಞಾನವನ್ನಾದರೂ ಪಡೆಯುವಂತೆ ನಮ್ಮ ಮನೆ ಮನೆಗಳಲ್ಲಿ, ವಿದ್ಯಾಲಯಗಳಲ್ಲಿ, ವ್ಯವಸ್ಥೆ ರೂಪಿಸಬೇಕು.

ಆದರೆ ಇಂದು ಪಾಶ್ಚಾತ್ಯ ಸಂಸ್ಕೃತಿ, ಭಾಷೆ ಹಾಗೂ ಸಾಮ್ಯವಾದ, ಕಮ್ಯೂನಿಸಂ, ಸೆಕ್ಯುಲರಿಸಂ ಮುಂತಾದ ವಿಚಾರಧಾರೆಯ ಪ್ರಭಾವದಿಂದ ನಮ್ಮವರೇ ನಮ್ಮ ಉತ್ಕೃಷ್ಟ ವಿಚಾರಧಾರೆಯನ್ನು ಒಂದು ವರ್ಗಕ್ಕೆ ಸೀಮಿತ ಮಾಡಿದರು. ಪರಿಣಾಮವಾಗಿ ವೇದ-ಉಪನಿಷತ್, ನ್ಯಾಯ, ವ್ಯಾಕರಣ, ವೇದಾಂತಾದಿ, ಶಾಸ್ತ್ರಗಳಲ್ಲಿ ಉಲ್ಲೇಖಿತವಾದ ವಿಚಾರಗಳನ್ನು ಪರಂಪರೆಯಿಂದ ಕಲಿಸುವ ವ್ಯವಸ್ಥೆಯೇ ಛಿದ್ರವಾಯಿತು. ಮತ್ತೆ ನಮ್ಮ ಅಸ್ತಿತ್ವವನ್ನು ಗಟ್ಟಿಮಾಡಿ ಭಾರತೀಯರ ಶ್ರೇಷ್ಠ ವಿಚಾರಧಾರೆಯ ಆಧಾರದ ಮೇಲೆ ಜಗತ್ತಿಗೆ ಮಾರ್ಗದರ್ಶನ ಮಾಡಬೇಕಾದರೆ, ಭಾರತೀಯ ಸಂಸ್ಕೃತಿಯ ಮತ್ತು ಭಾರತೀಯ ಭಾಷೆಗಳ ಎಲ್ಲ ಮಜಲುಗಳನ್ನು ವಿಕಾಸಮಾಡಿದ ನಮ್ಮೆಲ್ಲರ ಸಮಾನ ಸಾಂಸ್ಕೃತಿಕ ಭಾಷೆಯಾದ ಸಂಸ್ಕೃತವನ್ನು ಉಳಿಸಿ ಬೆಳೆಸಬೇಕು. ಜಗತ್ತು ಇಂದು ಭಾರತದ ಶ್ರೇಷ್ಠ ವಿಚಾರಗಳನ್ನು ತನ್ನದಾಗಿಸುವ ಹೊಸ್ತಿಲಲ್ಲಿರುವಾಗ ನಾವೇಕೆ ನಮ್ಮ ವಿಚಾರವನ್ನು

ಪುಟ 9 ಕ್ಕೆ ➤

# ವಿಜ್ಞಾನ ಮತ್ತು ತಂತ್ರಜ್ಞಾನದ ಸ್ವರೂಪ

■ ಜಿ. ಎಸ್. ಕೃಷ್ಣಮೂರ್ತಿ

ಸಾಮಾನ್ಯವಾಗಿ ವಿಜ್ಞಾನ ಎಂದಾಕ್ಷಣ ಅನೇಕ ಜನ ಇದು ಜನಸಾಮಾನ್ಯರಿಂದ ದೂರ ಇರುವ ವಿಚಾರ ಎನ್ನುವ ತೀರ್ಮಾನಕ್ಕೆ ಬರುತ್ತಾರೆ. ವಿಜ್ಞಾನ, ತಂತ್ರಜ್ಞಾನ ಜನ ಜೊತೆ ಜೊತೆಯಲ್ಲೇ ಇರುವ ಒಂದು ವಿಷಯ. ಆಜೀವದ ಜೊತೆಯಲ್ಲೇ ಹಾಸುಹೊಕ್ಕಾಗಿ ಪ್ರಸರಿಸಿದೆ ಎನ್ನುವುದರ ಅರಿವು ಮೂಡಿಸ ಬೇಕಾದವರು ಶಿಕ್ಷಕರು. ಅದಕ್ಕಾಗಿ ಈ ಕೆಳಕಂಡ ವಿಧಾನವನ್ನು ವಿಜ್ಞಾನ ಬೋಧನೆಯಲ್ಲಿ ಅಳವಡಿಸುವುದು ಉತ್ತಮ.

ವಿಜ್ಞಾನ, ತಂತ್ರಜ್ಞಾನದ ಸ್ವರೂಪ  ಜ್ಞಾನ, ತಂತ್ರಜ್ಞಾನ, ಸಮಾಜ ಮತ್ತು ಪರಿಸರ, ವೈಜ್ಞಾನಿಕ, ತಾಂತ್ರಿಕ ಕೌಶಲ್ಯಗಳು ಮತ್ತು ಮನೋಭಾವ, ಅವಶ್ಯಕ ವಿಜ್ಞಾನದ ಜ್ಞಾನ, ಪರಿಕಲ್ಪನೆಗಳ (ಕಾನ್ಸೆಪ್ಟ್) ಏಕೀಕರಣ (ಯೂನಿಫೈಯಿಂಗ್) ವಿಜ್ಞಾನ ಮತ್ತು ತಂತ್ರಜ್ಞಾನ ಇವೆರಡೂ ಮಾನವನ ಸೃಜನಶೀಲತೆಯ, ಹಾಗೂ ಕ್ರಿಯೋನ್ಮುಖವಾಗಿರುವ ಚಿಂತನೆಯ ಕೊಡುಗೆ.

ವಿಜ್ಞಾನ ಬ್ರಹ್ಮಾಂಡವನ್ನು ಅರಿಯುವ ಪ್ರಯತ್ನ. ಈ ಕಲಿಕೆಯ ಆರಂಭ– ಮಾನವನಿಗೆ ಕಲಿಯಬೇಕೆಂಬಾಸೆ, ಸೃಜನಶೀಲತೆ, ಕಾಲ್ಪನಿಕಶಕ್ತಿ, ಅಂತರ್ದೃಷ್ಟಿ, ಪರೀಕ್ಷಿಸುವ ಅಭ್ಯಾಸ, ಪ್ರಯೋಗಗಳ ಪುನರ್‌ಪರಿಶೀಲನೆ, ಆಧಾರಗಳ ಬಗ್ಗೆ ಅರ್ಥವಿವರಣೆ, ಹಾಗೂ ಸಾಕ್ಷ್ಯಾಧಾರಗಳ ಚರ್ಚೆ, ಅವುಗಳ ವ್ಯಾಖ್ಯಾನದ ಮೂಲಕ ತಿಳುವಳಿಕೆ.


ವೈಜ್ಞಾನಿಕ ಕಾರ್ಯ ಮುಂದಾಗುವುದರ ಕಲ್ಪನೆ, ಪ್ರಕೃತಿಯ ಮತ್ತು ಸಾಮಾಜಿಕ ಘಟನೆಗಳ ವಿವರಣೆ ಒಳಗೊಂಡಿರುತ್ತದೆ. ಬಹುತೇಕ ವೈಜ್ಞಾನಿಕ ತತ್ವಜ್ಞಾನಿಗಳು, ಸಮಾಜಶಾಸ್ತ್ರಜ್ಞರು, ಚರಿತ್ರಕಾರರು ವೈಜ್ಞಾನಿಕ ಸಂಶೋಧನೆಗೆ ಯಾವುದೇ ಪೂರ್ವ ನಿಗದಿತ ಮಾರ್ಗವಿಲ್ಲವೆಂದು ವಾದಿಸುತ್ತಾರೆ. ಇವರ ಪ್ರಕಾರ ವೈಜ್ಞಾನಿಕ ಕ್ರಿಯೆ ಎಂದರೆ ಸಿದ್ಧಾಂತ, ಜ್ಞಾನ ಹಾಗೂ ಪ್ರಯೋಗಿಕವಾಗಿ ಕಂಡುಕೊಂಡ ಸತ್ಯ.

ವೈಜ್ಞಾನಿಕ ಜ್ಞಾನ ಸೃಷ್ಠಿ, ವಾಸ್ತವಿಕವಾಗಿ  ಸಾಮೂಹಿಕ ಪ್ರಯತ್ನ. ವಿಜ್ಞಾನ ಬೇರೊಂದು ಪ್ರತ್ಯೇಕ ವಿಷಯವಲ್ಲ. ವಿಜ್ಞಾನಿಗಳು ತಾವು ಪ್ರಾಯೋಗಿಕವಾಗಿ ಅರಿತದ್ದನ್ನು ಮಂಡಿಸುತ್ತಾರೆ. ಅವರ ಹಿತಚಿಂತಕರು ತರ್ಕದ, ಪ್ರಯೋಗದ ಹಾಗೂ ಈಗಾಗಲೆ ಲಭ್ಯವಿರುವ ನಂಬಲರ್ಹವಾದ ಸಿದ್ಧಾಂತದ ಮೂಲಕ ಮಂಡನೆಯನ್ನು ಒಪ್ಪುತ್ತಾರೆ.

ವೈಜ್ಞಾನಿಕ ಸಿದ್ಧಾಂತಗಳು ಹೊಸಹೊಸ ಅಭಿಪ್ರಾಯ ಹೊರ ಬರುತ್ತಿದ್ದಂತೆಯೆ ಅವಿಷ್ಕಾರಗೊಂಡು ಬದಲಾಯಿಸಲ್ಪಡುತ್ತದೆ. ನವ ಕಲ್ಪನೆಗಳು (ಹೈಪಾಥಿಸಿಸ್), ಅಭಿಪ್ರಾಯ ಹೊರ ಹೊಮ್ಮುತ್ತಿದ್ದಂತೆಯೇ, ವೈಜ್ಞಾನಿಕ ಪ್ರಪಂಚದಲ್ಲಿ ಅಭಿಪ್ರಾಯ ಕುರಿತ ಕೂಲಂಕಶ ಚರ್ಚೆ ನಡೆಯುತ್ತದೆ. ಈ ಚರ್ಚೆಯಲ್ಲಿ ಅನೇಕ ವಿದ್ವಾಂಸರು, ಭಾಗವಹಿಸಿ, ಒಪ್ಪಿದಾಗಲೇ ಹೊಸ ಸಿದ್ಧಾಂತ ಅಸ್ತಿತ್ವಕ್ಕೆ ಬರುತ್ತದೆ. ಇಂದು ನಾವು ತಿಳಿದಿರುವುದು, ನಮ್ಮ ಹಿಂದಿನ ಜನಾಂಗದ ಕ್ರಾಂತಿಕಾರಿ ವೈಜ್ಞಾನಿಕ ಬೆಳವಣಿಗೆಗಳು, ಮುಂದುವರಿಯಬಹುದಾದ ಹಾಗೂ ಕ್ರಮೇಣ ಸಂಗ್ರಹಿಸಿದ ಜ್ಞಾನಸಂಪತ್ತು.

ತಂತ್ರಜ್ಞಾನದ ಉದಯ. ಮಾನವ ತನ್ನ ಪರಿಸರಕ್ಕೆ ಹೊಂದು ಕೊಳ್ಳುವ ಪ್ರಯತ್ನದಲ್ಲಿ ಬರುವ ಸಮಸ್ಯಾ ಪರಿಹಾರಗಳ ಸೂತ್ರಗಳು. ತಂತ್ರಜ್ಞಾನವು ಹೊಸ ವೈಜ್ಞಾನಿಕ ಪರಿಸರಕ್ಕೆ ಹೊಂದಿಕೊಳ್ಳುವ ಒಂದು ಸಾಧನ/ಯಂತ್ರವೆಂದು ಪರಿಗಣಿಸಬಹುದು. ತಂತ್ರಜ್ಞಾನ ವಿವಿಧ ಅಧ್ಯಯನ ವಿಭಾಗದಿಂದ ಆಯ್ದು ಕ್ರೋಢೀಕರಿಸಿದ ಜ್ಞಾನ ಭಂಡಾರ ಮತ್ತು ನಮಗೆ ಉಪಯುಕ್ತ ವಸ್ತುಗಳನ್ನು ತಯಾರಿಸಲು ಇರುವ ಸಂಪನ್ಮೂಲಗಳನ್ನು ಉಪಯೋಗಿಸುವ ಕೌಶಲ್ಯವೂ ಹೌದು. ತಂತ್ರಜ್ಞಾನ, ಕಾರ್ಯ ವಿಧಾನ, ಸಮಾಜದ ಮತ್ತು ಚಿಂತನೆಗಳ ಮೇಲೂ ಮಹತ್ತರ ಪರಿಣಾಮ ಬೀರಿದೆ.

ವಿಜ್ಞಾನ ಮತ್ತು ತಂತ್ರಜ್ಞಾನಗಳ ಗುರಿ, ಅನುಸರಿಸುವ ಮಾರ್ಗ ಮತ್ತು ಫಲಿತಾಂಶ ವಿಭಿನ್ನವಾದರೂ ಒಂದನ್ನೊಂದು ಅವಲಂಬಿಸಿದೆ. ಮುಂದೆ ಅದನ್ನು ಚಿತ್ರದ ಮೂಲಕ ಗಮನಕ್ಕೆ ತರಲಾಗಿದೆ. •






**"ಉಪ್ಪಿಗಿಂತಲು ರುಚಿಯು ತಾಯಿಗಿಂತಲು ಬಂಧು**
**ಇಲ್ಲೆಂಬ ಗಾದೆ ನುಡಿ ಕೇಳಿರುವೆನು**
**ಗೆಳೆತನದ ಶುಚಿರುಚಿಯು ಇದಕು ಮಿಗಿಲಾಗಿಹುದು**
**ಎಂಬ ಸಾಹಸ ಮಾಡೆ ದೋಷವೇನು?**
**ಕಂಡ ಕಂಡವರೇನು ಬಲ್ಲರಿದನು"**

ಕವಿ ಚೆನ್ನವೀರ ಕಣವಿಯವರ ಕವನದ ಈ ಸಾಲುಗಳು ಗೆಳೆತನ ಅಥವಾ ಸ್ನೇಹದ ಮಹತ್ವವನ್ನು ಸಾರುತ್ತವೆ. ವಿಶಾಲವಾದ ಆಲದ ಮರ ಸ್ನೇಹದ ಪ್ರತಿರೂಪ. ಭೂಲೋಕದಲ್ಲಿ ಗೆಳೆತನವೇ ನಿಜವಾದ ಅಮೃತ. ಸ್ನೇಹ ಅಥವಾ ಗೆಳೆತನವಿಲ್ಲದ ಜೀವನ ಅರ್ಥಹೀನ. ಈ ಸ್ನೇಹದಲ್ಲಿ ಮೋಸವೆಂಬುದಿಲ್ಲ. ಚಂಚಲತೆಯೂ ಇರುವುದಿಲ್ಲ. ಜಾತಿ ಭೇದ, ಮೇಲು ಕೀಳೆಂಬುದು ಇಲ್ಲವೇ ಇಲ್ಲ. ಅಹಂಕಾರ, ದ್ವೇಷಗುಣ, ಹೀನಗುಣ ಸಂಕೋಲೆಗಳು ಇರುವುದಿಲ್ಲ. ಮನಸ್ಸು ಆಕಾಶದಷ್ಟು ವಿಶಾಲವಾಗಿರುತ್ತದೆ. ತಿಳಿಕೊಳದ ಹಾಗೆ ಹೃದಯ ನಿರ್ಮಲವಾಗಿರುತ್ತದೆ. ಶುದ್ಧ ಸ್ಫಟಿಕದಂತೆ ಭಾವನೆ ಬಾಳಿನ ಬೆಳದಿಂಗಳಾಗಿರುತ್ತದೆ. ಸ್ನೇಹಕ್ಕೆ ಕುಂದು ಬಾರದಂತೆ ವರ್ತಿಸಬೇಕು. ಸ್ನೇಹಿತರ ಕಷ್ಟ ಸುಖಗಳಲ್ಲಿ ಸಹಭಾಗಿಯಾಗಬೇಕು. ಅವರಿಗೆ ಧೈರ್ಯ ನೀಡಬೇಕು ಎಂದು ಕವಿ ಹೇಳಿದ್ದಾರೆ.

"ಸಂಗಾತಿ ಒಳ್ಳೆಯವರಾಗಿದ್ದರೆ ಕನ್ನಡಿ ಬೇಕಾಗಿಲ್ಲ" ಎಂಬ ಗಾದೆಯಿದೆ. ಮನಸ್ಸಿನಲ್ಲಿ ಉಳಿದುಕೊಳ್ಳುವ ವ್ಯಸನ, ದುಃಖ, ಭಯ ಮೊದಲಾದವುಗಳನ್ನು ಹೇಳಿಕೊಳ್ಳಲು, ನೆಂಟರಿಗಿಂತ ಮಿತ್ರರೇ ವಾಸಿ ಎನಿಸುತ್ತದೆ.

ಒಳ್ಳೆಯದನ್ನು ಮಾಡಿದಾಗ ಗೆಳೆಯರು ಮೆಚ್ಚಿಕೊಳ್ಳಬೇಕು, ಉತ್ಸಾಹ ತುಂಬಬೇಕು, ಆದರೆ ತಪ್ಪನ್ನು ಮಾಡಿದಾಗ ಮೃದುವಾಗಿ, ಆದರೆ ನಿಶ್ಚಯವಾಗಿ ಅದನ್ನು ತೋರಿಸಿಕೊಡಬೇಕು. ತಪ್ಪನ್ನು ತಿದ್ದದಿದ್ದರೆ ಅವರು ಸ್ನೇಹಿತರೆನಿಸುವುದಿಲ್ಲ, ಶತ್ರುಗಳೆನಿಸುತ್ತಾರೆ.

ನವವಿಧ ಭಕ್ತಿಗಳಲ್ಲಿ ಸ್ನೇಹವೂ ಒಂದು. ದೇವರನ್ನು ಸ್ನೇಹಿತನಂತೆ ಮತ್ತು ಜೊತೆಗಾರನಂತೆ ಕಾಣುವುದೂ ಉಂಟು. ಸ್ನೇಹ ಎನ್ನುವುದು ಅಂತಹ ಉನ್ನತವಾದ ಗುಣ. ಅರ್ಜುನನಿಗೂ ಶ್ರೀಕೃಷ್ಣನಿಗೂ ಇದ್ದ ಸ್ನೇಹದ ಹೆಗ್ಗುರುತು 'ಭಗವದ್ಗೀತೆ' ಎಂಬ ಸುಂದರ ಕಾವ್ಯವಾಯಿತು.

ಮಧುರವಾದ ಸ್ವಭಾವ, ಹಾಸ್ಯದ ಹೊನಲು ತಿಳಿ ಮನಸ್ಸುಗಳಿಂದ ವರ್ತಿಸುವ ಕಲೆಯಲ್ಲಿ ಜಾಣತನ, ನಿಗರ್ವತೆ, ಇನ್ನೊಬ್ಬರನ್ನು ನೋಯಿಸದಂತಹ ಒಡನಾಟ, ಸಹಾಯ ಮಾಡುವ ಸ್ವಭಾವ, ನಂಬಿಕೆ ತುಂಬಬಲ್ಲ ರೀತಿಯಲ್ಲಿ ಪಳಗುವ ಗುಣ, ಇತರರ ಒಳಿತಿನ ಮೇಲೆ ದೃಷ್ಟಿ ಮುಂತಾದ ಗುಣಗಳುಳ್ಳವರು ಹೆಚ್ಚಿನ ಸ್ನೇಹಿತರನ್ನು ಸಂಪಾದಿಸಲು ಸಾಧ್ಯ.

ಸ್ನೇಹವೆಂಬುದು ಮನದ ಕತ್ತಲೆಯನ್ನು ಹೋಗಲಾಡಿಸುತ್ತದೆ. ಸ್ನೇಹವು ಆಗಸದೆತ್ತರಕ್ಕೆ ಏರಲು ನೆರವಾಗುವ ಮೋಡದ ಕೈಯಿದ್ದಂತೆ. ಜಾರಿ ಬಿದ್ದರೆ ಕಾಪಾಡುವ ಭೂ ತಾಯಿಯ ಅಂಗೈಯಿದ್ದಂತೆ. ಸ್ನೇಹವೆಂಬುದು ಕಂಡ ಕನಸ್ಸಿನ ಕನ್ನಡಿಯಿದ್ದಂತೆ, ನೊಂದ ಮನಸ್ಸಿಗೆ ಸಾಂತ್ವನದ ಮುನ್ನುಡಿಯಿದ್ದಂತೆ. ತಪ್ಪುದಾರಿಗೆ ಹೋಗುವವರಿಗೆ ಸ್ನೇಹ ಸನ್ಮಾರ್ಗದ ದಾರಿ ದೀಪವಾಗಿದೆ. ಬೇಕೆನಿಸಿದಾಗ ಸ್ನೇಹ ಸಹಾಯ ಹಸ್ತವನ್ನು ಚಾಚುತ್ತದೆ. ದಣಿವಾದಾಗ ಮಹಾ ವೃಕ್ಷದಂತೆ ನೆರಳು ನೀಡಿ ದಣಿವಾರಿಸಲು ಸಹಕಾರಿಯಾಗಿದೆ.

ಸ್ನೇಹ ಸಾಗರವೆಂಬುದು ಅತ್ಯಂತ ಆಳವಾದದ್ದು. ಮೊಗೆದಷ್ಟು ನಮಗೆ ಅಲ್ಲಿಂದ ಆನಂದ, ತೃಪ್ತಿ, ನೆಮ್ಮದಿ, ಸಂತೋಷ ಎಂಬ ಅನೇಕ ಮುತ್ತು ರತ್ನಗಳು ದೊರೆಯುವುದರಲ್ಲಿ ಸಂದೇಹವಿಲ್ಲ. ಸ್ನೇಹವು ಒಂದು ಅಮೃತಬಿಂದು, ಸ್ನೇಹವೆಂಬುದು ಒಂದು ಮಧುರ ಅನುಭವ. ಇದನ್ನು ಮಾರುಕಟ್ಟೆಯಿಂದ ಕೊಂಡು ತರಲು ಸಾಧ್ಯವಿಲ್ಲ. ಇದನ್ನು ಪಡೆಯಲು, ದಕ್ಕಿಸಿಕೊಳ್ಳಲು ತಾಳ್ಮೆಯಿಂದ ಮುನ್ನಡೆಯಬೇಕು. ಮಾನವ ಜೀವನದ ಮೊದಲ ಹೆಜ್ಜೆಯೇ ಸ್ನೇಹ ಅಥವಾ ಗೆಳೆತನ.

ಶ್ರೀಕೃಷ್ಣ ಹಾಗೂ ಕುಚೇಲರ ಸ್ನೇಹ ಆದರ್ಶವಾಗಿದೆ. ಸುಧಾಮ ಹಾಗೂ ಶ್ರೀ ಕೃಷ್ಣ ಬಾಲ್ಯ ಸ್ನೇಹಿತರು. ಒಂದೇ ಗುರುವಿನ ಬಳಿ ವಿದ್ಯಾಭ್ಯಾಸ ಮಾಡಿದರು. ಸುಧಾಮನು ಬಡ ಕುಚೇಲ. ಗೆಳೆಯನಾದ ಕೃಷ್ಣನ ಬಳಿ ಸಹಾಯ ಕೇಳಲು ಅವನ ಅರಮನೆಗೆ ಸುಧಾಮನು ಬರುತ್ತಾನೆ. ಆದರೆ ತನ್ನ ಕಷ್ಟವನ್ನು ಹೇಳಿಕೊಳ್ಳಲಾರದೆ ತೊಳಲಾಡುತ್ತಾನೆ. ಕೃಷ್ಣನಿಗಾಗಿ ತಂದಿದ್ದ ಅವಲಕ್ಕಿಯನ್ನು ತನ್ನ ಹರಿದ ಬಟ್ಟೆಯಲ್ಲಿ ಗಂಟು ಕಟ್ಟಿಕೊಂಡಿರುತ್ತಾನೆ. ಕೃಷ್ಣನೇ ಸ್ವತಃ ಆ ಗಂಟನ್ನು ಬಿಚ್ಚಿ ಅದರಲ್ಲಿದ್ದ ಅವಲಕ್ಕಿಯನ್ನು ತಾನೂ ತಿಂದು ರುಕ್ಮಿಣಿಗೂ ನೀಡಿ ಅದರ ರುಚಿಯನ್ನು ಆಸ್ವಾದಿಸುತ್ತಾನೆ. ಬಾಯಿ ಬಿಟ್ಟು ಕೇಳದಿದ್ದರೂ ಸುಧಾಮನ ಬಡತನವನ್ನು ಕೃಷ್ಣನು ಹೋಗಲಾಡಿಸುತ್ತಾನೆ. ಇದರಿಂದ ಶ್ರೀಕೃಷ್ಣನಿಗೂ ಸುಧಾಮನಿಗೂ ಇದ್ದ ಸ್ನೇಹ ಸಂಬಂಧ ಎಷ್ಟು ಸುಂದರವಾದುದು ಎನಿಸುತ್ತದೆ. ಸ್ನೇಹ ಎನ್ನುವುದು ಎಲ್ಲ ಅಂಕಗಳನ್ನು ಮೀರಿರುವಂಥದ್ದು ಒಂದು ಹಿಡಿ ಅವಲಕ್ಕಿಗಾಗಿ ಸರ್ವಸ್ವವನ್ನು ಸ್ನೇಹಿತನಿಗಾಗಿ ಕೊಡಲು ಶ್ರೀ ಕೃಷ್ಣನು ಸಿದ್ಧನಾಗಿದ್ದ. ಇದು ಸ್ನೇಹದ ಶ್ರೇಷ್ಠ ಗುಣ.

ನಮ್ಮ ಸ್ನೇಹಕ್ಕೆ ಮಾದರಿ ಮೇಲಿನ ನಿದರ್ಶನಗಳು. ನಿಜವಾಗಿಯೂ ನಮ್ಮ ಸ್ನೇಹ ನಿಷ್ಕಲ್ಮಶವೇ?. ಆಗಸ್ಟ್ 7 ರಂದು 'ಸ್ನೇಹಿತರ ದಿನಾಚರಣೆ' ಯನ್ನು ಆಚರಿಸಲಾಗುತ್ತದೆ. ಕೇವಲ ತೋರಿಕೆಗಾಗಿ, ಸ್ವಾರ್ಥ ಸಾಧನೆಗಾಗಿ 'ಫ್ರೆಂಡ್‌ಶಿಪ್ ಡೇ' (Friend ship day) ಆಚರಿಸುವುದು ಅರ್ಥಹೀನ, ಸ್ನೇಹದ ಮಹತ್ವವನ್ನು ಅರಿತು ನಡೆಯಬೇಕು. ಸ್ನೇಹಕ್ಕೆ ಕುಂದುಬಾರದಂತೆ ವರ್ತಿಸುವುದರಿಂದ ಇಂಥ ದಿನಾಚರಣೆಗಳ ಆಚರಣೆ ಯೋಗ್ಯವೆನಿಸುತ್ತವೆ. ಸ್ನೇಹದ ಮಹತ್ವವನ್ನು ಅರಿತು ನಡೆಯಬೇಕು.

●

# ರಾಷ್ಟ್ರಾರಾಧಕ ಗೋಪಾಲ ಕೃಷ್ಣ ಗೋಖಲೆ

**ಹೆಚ್. ನಾಗಭೂಷಣ್ ರಾವ್**
**ಪೋಷಕರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**



ದಕ್ಷಿಣ ಆಫ್ರಿಕಾದಿಂದ ಮೋಹನದಾಸ ಕರಮಚಂದ ಗಾಂಧಿ ಭಾರತಕ್ಕೆ ಬಂದಾಗ, ಅವರಿಗೆ ಭಾರತದಲ್ಲಿ ತಾನೇನು ಮಾಡಬೇಕೆಂಬುದು ತಿಳಿದಿರಲಿಲ್ಲ. ಅಂತಹ ಸಮಯದಲ್ಲಿ ಅವರು ಪ್ರಪ್ರಥಮವಾಗಿ ಭೇಟಿ ಆಗಿದ್ದು (1896). ಆಗಲೇ ಜನ ನಾಯಕರೆಂದು ಗುರುತಿಸಲ್ಪಟ್ಟಿದ್ದ ಗೋಪಾಲಕೃಷ್ಣ ಗೋಖಲೆಯವರನ್ನು. ಅವರ ಸಲಹೆಯ ಮೇರೆಗೇ ಗಾಂಧಿ ಭಾರತದ ಪರಿಕ್ರಮಣ ಕೈಗೊಂಡು ಜನಮನವನ್ನು ಅರಿತದ್ದು. ಅದಕ್ಕಾಗೇ ಗಾಂಧೀಜೀ, ಗೋಖಲೆಯುವರನ್ನು ತಮ್ಮ 'ರಾಜಕೀಯ ಗುರು'ವೆಂದು ಕರೆದದ್ದು.



**ಗೋಪಾಲಕೃಷ್ಣ ಗೋಖಲೆಯವರು**
**(9.5.1866–19.5.1915)**
**ಗಣ್ಯ ರಾಜ್ಯಶಾಸ್ತ್ರಜ್ಞರೂ, ಅರ್ಥಶಾಸ್ತ್ರಜ್ಞರೂ, ಜನ ಸೇವಕರೂ, ಸಮಾಜಸುಧಾರಕರೂ, ಆದರ್ಶ ಅಧ್ಯಾಪಕರೂ, ಶ್ರೇಷ್ಠ ಶಿಕ್ಷಣ ತಜ್ಞರೂ ಮಾತ್ರವಲ್ಲ ಅಪ್ರತಿಮ ದೇಶಭಕ್ತರೂ ಆಗಿದ್ದರು. ಅವರು ಆಧುನಿಕ ಭಾರತದ ವಿಕಾಸಕ್ಕೆ ಅಸ್ತಿಭಾರ ನಿರ್ಮಿಸಿದ ಪ್ರಮುಖಲೊಬ್ಬರು. ಡಿ.ವಿ ಗುಂಡಪ್ಪನವರೂ ಸೇರಿದಂತೆ ಹಿಂದಿನ ತಲೆಮಾರಿನ ಹತ್ತಾರು ಜನ ಸಮಾಜ ಸೇವಕರಿಗೆ ಪ್ರೇರಣಾ ಸ್ತೋತ್ರವಾಗಿದ್ದವರು. ಎಲ್ಲಕ್ಕೂ ಮಿಗಿಲಾಗಿ ಮಹಾತ್ಮ ಗಾಂಧಿಯವರ ರಾಜಕೀಯ ಗುರುಗಳಾಗಿದ್ದವರು. ಅವರ 150ನೇ ಜನ್ಮ ವರ್ಷಾಚರಣೆಯ ನಿಮಿತ್ತ ಈ ಲೇಖನ.**

## ಯಾರೀ ಗೋಖಲೆ ?

ಗೋಪಾಲ ಕೃಷ್ಣ ಗೋಖಲೆ ಭಾರತ ರಾಷ್ಟ್ರೀಯ ಚಳುವಳಿಯ ಅಗ್ರಗಣ್ಯ ನೇತಾರ. ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಹಿರಿಯ ನಾಯಕ. ಬ್ರಿಟಿಷರ ದಾಸ್ಯದಿಂದ ಬಿಡುಗಡೆ ಬಯುಸುತ್ತಿದ್ದ ಕೋಟ್ಯಾಂತರ ಭಾರತೀಯರ ಮನದಾಳದ ತುಡಿತಕ್ಕೆ ದನಿ ನೀಡಿದ ಹೋರಾಟಗಾರ. ರಾಜಕೀಯ ನೇತಾರರಷ್ಟೇ ಅಲ್ಲ ಅವರು ಶ್ರೇಷ್ಠ ಸಮಾಜ ಸುಧಾರಕರೂ ಹೌದು. 'ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ' ಎಂಬ ಸಂಸ್ಥೆಯನ್ನು ಕಟ್ಟಿ ಸಾಮಾನ್ಯ ಜನರ ಬದುಕಿಗೆ ಸಮರ್ಪಿಸಿದರು.

**ಹುಟ್ಟು ಬಾಲ್ಯ:** ಮಹಾರಾಷ್ಟ್ರದ ಕೋಥಾಪುರ ಎಂಬ ಗ್ರಾಮದಲ್ಲಿ ಸಾಧಾರಣ ರೈತರಾಗಿದ್ದ ಕೃಷ್ಣರಾವ್ ಅವರಿಗೆ ಗೋಪಾಲ ಹುಟ್ಟಿದ್ದು 1866 ರ ಮೇ 9 ರಂದು. ತಾಯಿ ವಾಲೂಬಾಯಿ ದೈವಬೀರು ಮಹಿಳೆ. ಜಮೀನಿನಲ್ಲಿ ಕೃಷಿ ಸಾಧ್ಯವಾಗದೆ ಕೃಷ್ಣರಾವ್ ಹಳ್ಳಿಯಲ್ಲಿ ಗುಮಾಸ್ತರ ಕೆಲಸ ಹಿಡಿದರು. ಕೋಥಾಪುರದ ರಾಜಾರಾಂ ಹೈಸ್ಕೂಲಿನಲ್ಲಿ ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣ ಮುಗಿಸಿ ಅಣ್ಣನ ಆರ್ಥಿಕ ನೆರವಿನಿಂದ ಮುಂಬಯಿಯ ಎಲ್ಫಿನ್‌ಸ್ಟನ್ ಕಾಲೇಜಿನಿಂದ 1884 ರಲ್ಲಿ 18 ನೇ ವಯಸ್ಸಿಗೇ ಪದವೀಧರರಾದರು. ಆಗಿನ ಕಾಲದ ಆಂಗ್ಲ ಶಿಕ್ಷಣ ಪಡೆದ ಮೊದಲ ಪೀಳಿಗೆಯಲ್ಲಿ ಇವರೂ ಒಬ್ಬರು.

**ವೃತ್ತಿ ಜೀವನ:** ಪದವಿಯನ್ನು ಪಡೆದ ನಂತರ ಶಿಕ್ಷಕ ವೃತ್ತಿಯನ್ನು ಆರಿಸಿಕೊಂಡು ಪೂನಾ ನಗರದ ನ್ಯೂ ಇಂಗ್ಲೀಷ್ ಶಾಲೆಯುಲ್ಲಿ ಸಹ ಅಧ್ಯಾಪಕರಾದರು. 1885 ರಲ್ಲಿ ಡೆಕನ್ ಎಜುಕೇಷನ್ ಸೊಸೈಟಿಯು ಗೆಳೆಯರೊಂದಿಗೆ ಕೂಡಿಕೊಂಡು ಫರ್ಗ್ಯುಸನ್ ಕಾಲೇಜನ್ನು ಸ್ಥಾಪಿಸಿ 20 ವರ್ಷಗಳ ಕಾಲ ಅಧ್ಯಾಪಕರಾಗಿ, ಪ್ರಾಂಶುಪಾಲರಾಗಿ ಕೆಲಸ ಮಾಡಿದರು. ಆಗಲೇ ಅವರು ನ್ಯಾಯ ಮೂರ್ತಿ ಮಹದೇವ ಗೋವಿಂದ ರಾನಡೆಯವರ ಮಾರ್ಗದರ್ಶನದಲ್ಲಿ 'ಪೂನಾ ಸಾರ್ವಜನಿಕ ಸಭೆ' ಕಾರ್ಯದರ್ಶಿಯಾದರು.

**ಸಾರ್ವಜನಿಕ ಜೀವನ:** 1886ರಲ್ಲಿ ತಮ್ಮ 20ನೇ ವಯಸ್ಸಿನಲ್ಲಿ ಅವರು ಸಾರ್ವಜನಿಕ ಜೀವನಕ್ಕೆ ಪ್ರವೇಶಿಸಿದ್ದು, ' ಬ್ರಿಟಿಷರ ಆಡಳಿತದಲ್ಲಿ ಭಾರತ' ಎಂಬ ಅವರ ಸಾರ್ವಜನಿಕ ಭಾಷಣ ಅಂದಿನ ಎಲ್ಲ ಬುದ್ಧಿ ಜೀವಿಗಳ ಗಮನ ಸೆಳೆಯಿತು. ಲೋಕಮಾನ್ಯ ಬಾಲಗಂಗಾಧರ ತಿಲಕರು ನಡೆಸುತ್ತಿದ್ದ 'ಮರಾಠ' ಎಂಬ ಸಾಪ್ತಾಹಿಕಕ್ಕೆ ಪ್ರತಿವಾರ ಬರೆಯುತ್ತಿದ್ದ ಪ್ರಖರ ಲೇಖನಗಳ ಮೂಲಕ ಭಾರತೀಯರ ಹೃದಯದಲ್ಲಿ ರಾಷ್ಟ್ರಭಕ್ತಿಯ ಕಿಚ್ಚನ್ನು ಹೊತ್ತಿಸಿದರು. 1895ರಲ್ಲಿ ಪೂನಾದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನಕ್ಕೆ ಸ್ವಾಗತ ಸಮಿತಿಯ ಕಾರ್ಯದರ್ಶಿಯಾಗಿ ನಂತರ ಕಾಂಗ್ರೆಸ್‌ನಲ್ಲಿ ಪ್ರಮುಖ ಸದಸ್ಯರಲ್ಲಿ ಒಬ್ಬರಾದರು. ಪೂನಾ ಪೌರಸಭೆಗೆ 2 ಬಾರಿ ಅಧ್ಯಕ್ಷರಾಗಿದ್ದ ಅವರು ಮುಂಬಯಿ ಲೆಜಿಸ್ಲೇಟಿವ್ ಕೌನ್ಸಿಲ್‌ನ ಸದಸ್ಯರೂ ಆಗಿದ್ದರು. 1897ರಲ್ಲಿ ಲಂಡನ್‌ಗೆ ತೆರಳಿ ಅಲ್ಲಿದ್ದ 48 ದಿನಗಳಲ್ಲಿ

ಪುಟ 7 ಕ್ಕೆ ➢

➢ ಪುಟ 6 ರಿಂದ..... ರಾಷ್ಟ್ರಾರಾಧಕ...

47 ಕಡೆ ಭಾಷಣಗಳ ಮೂಲಕ ಬ್ರಿಟಿಷರ ದಮನ ನೀತಿ ಹಾಗೂ ಭಾರತ ಸ್ವಾತಂತ್ರ್ಯ ಅಗತ್ಯತೆ ಬಗ್ಗೆ ಭಾಷಣ ಮಾಡಿ ಜನ ಜಾಗೃತಿ ನಿರ್ಮಿಸಿದರು.

**ಜೀವನಾದರ್ಶ : ವಿದ್ಯಾರ್ಥಿಯಾಗಿ :** ಅವರು ಪ್ರೌಢಶಾಲೆಯಲ್ಲಿದ್ದಾಗ ಗಣಿತದ ಅಧ್ಯಾಪಕರು ಕಠಿಣ ಸಮಸ್ಯೆಯೊಂದನ್ನು ತರಗತಿಯ ಮುಂದಿಟ್ಟರು. ಯಾರೂ ಬಿಡಿಸಲಾಗದ ಸಮಸ್ಯೆಯನ್ನು ಗೋಖಲೆ ಬಿಡಿಸಿದರು. ಉಪಾಧ್ಯಾಯರಿಗೆ ಸಂತೋಷವಾಗಿ ಅವರನ್ನು ಮುಂದಿನ ಬೆಂಚಿನಲ್ಲಿ ಕೂರಲು ಕರೆದರು. ಆಗ ಗೋಖಲೆಯವರು ಸಮಸ್ಯೆಯ ಪರಿಹಾರಕ್ಕೆ ಗೆಳೆಯರೊಬ್ಬರ ನೆರವನ್ನು ಪಡೆದುದಾಗಿ ತಿಳಿಸಿ ಉಪಾಧ್ಯಾಯರ ಮೆಚ್ಚುಗೆಯನ್ನು ನಯವಾಗಿ ನಿರಾಕರಿಸಿದರು.

ಬಾಲ್ಯದಿಂದಲೂ ಗೋಖಲೆ ಅಸಾಧಾರಣ ಸ್ಮರಣಶಕ್ತಿಯನ್ನು ಗಳಿಸಿಕೊಂಡಿದ್ದರು. ಒಮ್ಮೆ ಒಂದು ಪಠ್ಯಪುಸ್ತಕವನ್ನು ಕೊಳ್ಳಲು ಹಣ ಇಲ್ಲದಿದ್ದಾಗ, ತಮ್ಮ ಗೆಳೆಯನ ಪುಸ್ತಕವನ್ನು ಎರವಲು ಪಡೆದು, ಎರಡೇ ದಿನದಲ್ಲಿ ಅಷ್ಟೂ ಪಾಠಗಳನ್ನು ಕಂಠಸ್ಥ ಮಾಡಿಕೊಂಡರು.

ಒಮ್ಮೆ, ತಮ್ಮ ಅಣ್ಣ ಗೋವಿಂದನೊಡಗೂಡಿ ಗೆಳೆಯರೊಂದಿಗೆ ಆಟ ಆಡುತ್ತಿದ್ದಾಗ, ಆಟದಲ್ಲಿ ಗೆಲ್ಲಲು ಅಣ್ಣ ಗೋವಿಂದ ಮೋಸದ ಉಪಾಯ ಹೇಳಿದನು. ಆದರೆ ಗೋಪಾಲನು 'ಪ್ರಾಣ ಹೋದರೂ ಇಂಥ ಅನ್ಯಾಯದ ಕೆಲಸವನ್ನು ಮಾಡಲಾರೆ' ಎಂದು ಅಣ್ಣನಿಗೆ ಖಡಾಖಂಡಿತವಾಗಿ ಹೇಳಿದರು.

ಅವರಿಗೆ 19 ವರ್ಷ ವಯಸ್ಸಾಗಿದ್ದಾಗಿನ ಈ ಘಟನೆ ನಿಯಮ ಪಾಲನೆಗೆ ಪ್ರಸಿದ್ಧವಾಗಿದೆ. ಪುಣೆಯ ಡೆಕ್ಕನ್ ಎಜುಕೇಷನ್ ಸೊಸೈಟಿಯ ಸಮಾರಂಭವೊಂದನ್ನು ಅಂದಿನ ಮುಂಬಯಿ ಗೌರ್ನರ್ ಉದ್ಘಾಟಿಸಬೇಕಿತ್ತು. ಆಮಂತ್ರಣ ಪತ್ರಿಕೆ ತಂದವರಿಗೆ ಮಾತ್ರ ಪ್ರವೇಶವೆಂಬ ನಿಯಮ. ಪ್ರವೇಶದ್ವಾರದಲ್ಲಿ ಅತಿಥಿಗಳನ್ನು ಸ್ವಾಗತಿಸುವ ಕೆಲಸ ತರುಣ ಗೋಖಲೆಯವರದ್ದು. ಸಭೆಗೆ ಆಗಮಿಸಿದ ನ್ಯಾಯಮೂರ್ತಿ ಮಹಾದೇವಗೋವಿಂದ ರಾನಡೆಯವರು ಆಮಂತ್ರಣ ಪತ್ರ ತಂದಿರಲಿಲ್ಲ. ಗೋಖಲೆಯವರು ಮುಲಾಜಿಲ್ಲದೆ ರಾನಡೆಯವರಿಗೆ ಪ್ರವೇಶ ನಿರಾಕರಿಸಿದರು. ಇದನ್ನು ದೂರದಿಂದ ಗಮನಿಸಿದ ಅಧಿಕಾರಿಯೊಬ್ಬರು ಕೂಡಲೇ ಧಾವಿಸಿ ಬಂದು ರಾನಡೆಯವರನ್ನು ತಮ್ಮ ಜತೆ ಒಳಕ್ಕೆ ಕರೆದೊಯ್ದರು. ತನ್ನಿಂದ ಅಪರಾಧವಾಯಿತೇನೋ ಎಂಬ ಭಾವನೆ ಗೋಖಲೆಯವರನ್ನು ಕಾಡತೊಡಗಿತು. ಅವರ ಈ ಅಪರಾಧಕ್ಕೆ 6 ತಿಂಗಳ ನಂತರ 'ದಂಡನೆ' ದೊರೆಯಿತು! ಗೋಖಲೆಯವರನ್ನು ರಾನಡೆಯವರು ಕರೆಕಳುಹಿಸಿದರು. ಅಳುಕಿನಿಂದಲೇ ರಾನಡೆಯವರ ಬಳಿ ಹೋದ ಗೋಖಲೆಯವರಿಗೆ ರಾನಡೆಯವರು ಹೇಳಿದ್ದು "ನೀವು ದಯವಿಟ್ಟು ಪುಣೆಯ ಸಾರ್ವಜನಿಕ ಸಭೆಯ ಕಾರ್ಯದರ್ಶಿ ಸ್ಥಾನವನ್ನು ಒಪ್ಪಿಕೊಳ್ಳಬೇಕೆಂದು ಕೋರುತ್ತೇನೆ" ಆಗ ಗೋಖಲೆಯವರಿಗೆ ಕೇವಲ 20 ವರ್ಷ!

**ಆದರ್ಶಪ್ರಿಯತೆ:** ಜೀವನೋಪಾಯಕ್ಕಾಗಿ ಹೆಚ್ಚು ಗಳಿಕೆಯ ಸಾಧ್ಯತೆಗಳಿದ್ದ ಇಂಜಿಯರಿಂಗ್, ವಕೀಲ ಮೊದಲಾದ ಕ್ಷೇತ್ರಗಳ ಆಕರ್ಷಣೆಯಿಂದ ದೂರ ಉಳಿದು, ಅಧ್ಯಾಪಕ ವೃತ್ತಿಯನ್ನೇ ಆಯ್ಕೆ ಮಾಡಿಕೊಂಡದ್ದು ಗೋಖಲೆಯವರ ಆದರ್ಶಪ್ರಿಯತೆಯನ್ನು ಸೂಚಿಸುತ್ತದೆ. 1885 ರಿಂದ 1902 ರವರೆಗೆ 18 ವರ್ಷಗಳ ಕಾಲ ಅವರ ಜೀವಿಕೆಗೆ ಆಧಾರವಾಗಿದ್ದುದು ಪುಣೆಯ ಡೆಕ್ಕನ್ ಎಜುಕೇಷನ್ ಸೊಸೈಟಿಯ ಫರ್ಗುಸನ್ ಕಾಲೇಜಿನ ಬೋಧಕತ್ವ. ಆ ಧ್ಯೇಯ ಪ್ರವರ್ತಿತ ಸಂಸ್ಥೆಯಲ್ಲಿ ಮುಖ್ಯೋಪಾಧ್ಯಾಯರೂ ಸೇರಿದಂತೆ ಎಲ್ಲರೂ ಪಡೆಯುತ್ತಿದ್ದ ಗರಿಷ್ಠ ಸಂಬಳ ತಿಂಗಳಿಗೆ 75 ರೂ!

ಶಿಕ್ಷಣ ಕ್ಷೇತ್ರಕ್ಕೆ ಅವರ ಕೊಡುಗೆ ಅಪಾರ. 30 ವಯಸ್ಸಿನಲ್ಲಿ 490 ಪುಟದ ಅಂಕಗಣಿತ ಪುಸ್ತಕವನ್ನು ಮಾತೃಭಾಷೆಯಲ್ಲಿ, ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ಬರೆದು ಪ್ರಕಟಿಸಿದರು. ಆ ಕಾಲದಲ್ಲಿ ವಿಷಯಬೋಧಕರು (Subject Teachers) ಇರುತ್ತಿರಲಿಲ್ಲ. ಹೀಗಾಗಿ ಅವಶ್ಯಕತೆಗನುಗುಣವಾಗಿ ಇಂಗ್ಲೀಷ್ ಭಾಷೆ– ಸಾಹಿತ್ಯ, ಚರಿತ್ರೆ, ಅರ್ಥಶಾಸ್ತ್ರ, ಗಣಿತಶಾಸ್ತ್ರ ಮುಂತಾದ ವಿವಿಧ ವಿಷಯಗಳನ್ನು ಗೋಖಲೆಯವರು ಬೋಧಿಸಬೇಕಾಗುತ್ತಿತ್ತು. ಅವರು ಮಾಸ್ತರಿಕೆಯನ್ನು ಅರೆಮನಸ್ಸಿನಿಂದ ಬಿಟ್ಟದ್ದೂ ರಾಜಕೀಯ ಕಾರ್ಯದ ಅಧಿಕ ಒತ್ತಡದಿಂದ.

**ಪ್ರಖರ ದೇಶಭಕ್ತಿ :** ಗೋಖಲೆಯವರ ಪ್ರಖರ ದೇಶಭಕ್ತಿಯೇ ಅವರು ಅಗ್ಗದ ಜನಪ್ರಿಯತೆಯನ್ನು ಅರಸುವುದಕ್ಕೆ ಅಡ್ಡಿ ಬಂದಿತ್ತು. ಬಡಾಯಿ ಮಾತಿನವರನ್ನೂ, ಧೈರ್ಯಹೀನರನ್ನು ಅವರು ರವೆಯಷ್ಟೂ ಸಹಿಸುತ್ತಿರಲಿಲ್ಲ. ನೈತಿಕವಾಗಿಯೂ, ಬೌದ್ಧಿಕವಾಗಿಯೂ ತಾವು ನಿರ್ಣಯಿಸಿ ಕೊಂಡಿದ್ದ ಸ್ಥಿತಿಯನ್ನು ಅವರು ಎಂದೂ ಸಡಿಲಗೊಳಿಸಲು ಒಪ್ಪುತ್ತಿರಲಿಲ್ಲ. ಕೇವಲ ಅಭಿವೃದ್ಧಿಪರ ಯೋಜನೆಗಳನ್ನು ಕುರಿತ ಅವರ ಸೂಚನಾವಳಿಯನ್ನು ಲಘುವಾಗಿ ಟೀಕಿಸಿದ ಆಂಗ್ಲ ಐ.ಸಿ.ಎಸ್ ಅಧಿಕಾರಿಯೊಬ್ಬನ ಮುಖಕ್ಕೆ ರಾಚುವಂತೆ ಗೋಖಲೆ ಹೇಳಿದರು "ನಿಮಗೆ ಇಲ್ಲಿಯ ವ್ಯವಹಾರಗಳನ್ನು ಟೀಕಿಸುವ ಅಧಿಕಾರವನ್ನು ಕೊಡುವಂತಹ ಯಾವುದಾದರೂ ಅಲ್ಪ ರಚನಾತ್ಮಕ ಜನಹಿತಕಾರ್ಯವನ್ನು, ನೀವು ಇದುವರೆಗೆ ಎಂದಾದರೂ ಮಾಡಿದ್ದೀರೇನು?" ಆ ದಿನಗಳಲ್ಲಿ ಉನ್ನತ ಆಂಗ್ಲ ಅಧಿಕಾರಿಗಳನ್ನು ಹೀಗೆ ತರಾಟೆಗೆ ತೆಗೆದುಕೊಳ್ಳುವ ಸ್ಥೈರ್ಯವಿದ್ದವರು ಬಹಳ ಕಡಿಮೆ ಜನ ಇದ್ದರು.

ಗೋಪಾಲ ಕೃಷ್ಣ ಗೋಖಲೆಯವರು ಬದುಕಿದ್ದುದು ಕೇವಲ 48 ವರ್ಷ 9 ತಿಂಗಳು 10 ದಿನ. ಆದರೆ ಅವರ ಸಾಧನೆ ನೂರು ವರ್ಷಕ್ಕೂ ಮಿಕ್ಕಿದ್ದು. ಇದೀಗ ಅವರ ಹುಟ್ಟಿನ 150 ವರ್ಷ ನಡೆಯುತ್ತಿದೆ. ಇಂತಹ ಆದರ್ಶ ಅಧ್ಯಾಪಕರ, ಮಹಾನ್ ದೇಶಭಕ್ತನ ಸ್ಮರಣೆ ಮಾಡಿಕೊಂಡಾಗ ನಾವು ಅವರ ಜೀವನ ಸಂದೇಶವನ್ನು ವ್ರತದಂತೆ ಸ್ವೀಕರಿಸಿ, ಅದನ್ನು ಪಾಲನೆ ಮಾಡಿದರೆ ನಮ್ಮ ಬದುಕೂ ಸಾರ್ಥಕವಾಗುತ್ತದೆ. ●

# ಮಹಾತ್ಮರ ತಿಲಕಪ್ರಾಯ – ಬಾಲಗಂಗಾಧರ ತಿಲಕ್

ಭೀಮಸೇನ್ ಪುರೋಹಿತ್
B.E. MTech
ಇಂಜಿನಿಯರ್
ಬೆಂಗಳೂರು





ಗಾಂಧೀಜಿಗಿಂತಲೂ ಮುಂಚೆ, ಈ ದೇಶದ ಸ್ವರಾಜ್ಯಕ್ಕಾಗಿ ಇಡೀ ದೇಶದ ನರನಾಡಿಗಳಲ್ಲಿ ಕೆಚ್ಚನ್ನು ಬಡಿದೆಬ್ಬಿಸಿದ ಈ ಮಹಾತ್ಮರು ಸರ್ವರಿಂದಲೂ ಮಾನ್ಯರಾದವರು. ಅದೇ ಕಾರಣಕ್ಕಾಗಿ "ಲೋಕಮಾನ್ಯ" ಎಂಬ ಹೆಸರನ್ನು ಪಡೆದ ಧೀಮಂತ ವ್ಯಕ್ತಿ. "ಭಾರತದಲ್ಲಿಯ ಅಶಾಂತಿಯ ಜನಕ" ಎಂದು ಬ್ರಿಟಿಷರೂ ಹೆದರುವಂತೆ ಮಾಡಿದ ವೀರಸಿಂಹ. ಅದರ ಅರಿವಾಗಲೆಂದೋ ಏನೋ, ತಮ್ಮ ಪತ್ರಿಕೆಗೂ "ಕೇಸರಿ" ಎಂಬ ಅನ್ವರ್ಥ ನಾಮವನ್ನಿಟ್ಟು, ಲೇಖನಿಯ ಗರ್ಜನೆಯಿಂದಲೇ, ತಮ್ಮ ಬಳಗವನ್ನು ಎಚ್ಚರಿಸಿ, ಉಳಿದ ಮಿಕಗಳನ್ನು ನಡುಗಿಸಿದರು.

"ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು, ನಾನದನ್ನು ಪಡೆದೇ ತೀರುತ್ತೇನೆ" ಎಂಬ ಕೆಚ್ಚೆದೆಯ ನುಡಿಗಳನ್ನು ಘಂಟಾಘೋಷವಾಗಿ ಸಾರಿದ ಬಾಲಗಂಗಾಧರ ತಿಲಕರು, ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯವರು. ಬಾಲ್ಯದಲ್ಲಿ ಆಂಗ್ಲರ ಶಿಕ್ಷಣಕ್ರಮದಲ್ಲಿ ಅಧ್ಯಯನ ಮಾಡಿದ ತಿಲಕರಿಗೆ, ಅದರಲ್ಲಿನ ನ್ಯೂನತೆಗಳ ಅರಿವಾಗಿತ್ತು. ಇಂತಹದೇ ಪದ್ಧತಿಯಲ್ಲಿ ಬಾಲಕರು ಬೆಳೆದರೆ, ತಮ್ಮ ನಾಡು-ನುಡಿಗಳ ಮಹತ್ವವನ್ನೇ ಮರೆತುಬಿಡುತ್ತಾರೆಂಬ ದೂರದೃಷ್ಟಿಯಿಂದ ರಾಷ್ಟ್ರೀಯ ಬೋಧನೆಗಳನ್ನೊಳಗೊಂಡ ಶಾಲೆಗಳನ್ನು ಸ್ಥಾಪಿಸಿದರು. ರಾಷ್ಟ್ರೀಯವಾದವನ್ನು ಬೋಧಿಸುವ ಸಂಸ್ಥೆಗಳು ಈ ದೇಶದಲ್ಲಿ ತಲೆಯುತ್ತುವುದಕ್ಕೆ ಕಾರಣ-ಪುರುಷರೇ ತಿಲಕರು.

ತಿಲಕರು ಸ್ವಾತಂತ್ರ್ಯ ಹೋರಾಟವೆಂಬ ಒಂದೇ ಕಾರ್ಯದೆಡೆಗೆ ನಡೆದವರಲ್ಲ. ವಸ್ತುತಃ ಜನರ ಮನೋಭಾವನೆಯನ್ನೇ ಬದಲಿಸಿ ಜನರ ಹೋರಾಟವನ್ನಾಗಿ ಮಾಡಲು ಪ್ರಯತ್ನಿಸಿದ ಮೊದಲಿಗರು. ಗೋಖಲೆಯುವರಂತಹ ಮಂದಗಾಮಿ ನಾಯಕರು ಅನೇಕರಿದ್ದರೂ ಕೂಡ, ಕೇವಲ ಅರ್ಜಿಗಳಿಂದ ಸ್ವಾತಂತ್ರ್ಯ ಸಿಗುವುದಿಲ್ಲವೆಂದು ತಿಳಿದಿದ್ದ ತಿಲಕರು, ನಿಷ್ಠುರವಾಗಿಯೇ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದರು. ತಮ್ಮ "ಕೇಸರಿ" ಪತ್ರಿಕೆಯ ಮೂಲಕ, ಯುವ ಜನರಲ್ಲಿ ಉತ್ಸಾಹ ತುಂಬುವುದಲ್ಲದೆ ಸರ್ಕಾರದ 'ವಂಗ-ಭಂಗ' ದಂತಹ ನಡೆಗಳನ್ನು ಕಟುವಾಗಿ ಖಂಡಿಸಿ ಜೈಲಿಗೆ ಗುರಿಯಾಗಿದ್ದರು.

ಸ್ವದೇಶಿ ಉತ್ಪನ್ನಗಳ ಅಧಿಕ ಬಳಕೆಯಿಂದ, ಬ್ರಿಟಿಷರ ಆರ್ಥಿಕತೆಗೆ ತಕ್ಕ ಮಟ್ಟಿಗಾದರೂ ಹೊಡೆತ ಬಿದ್ದೇ ಬೀಳುತ್ತದೆಂದು ಅರಿತು, ಆ ನಿಟ್ಟಿನಲ್ಲಿ ಜನರಲ್ಲಿ ಸ್ವದೇಶಿ ಬಳಕೆಯ ಅರಿವನ್ನೂ ಹೆಚ್ಚಿಸಿದರು. ಅಲ್ಲದೆ, ಮಾನಸಿಕವಾಗಿ ದೂರ-ದೂರದಲ್ಲಿಯೇ ಉಳಿದಿದ್ದ ಎಲ್ಲ ಪಂಥದ ಜನರನ್ನು ಒಟ್ಟಿಗೆ ಸೇರಿಸಿ ಬೆರೆಸಲು ಸಾರ್ವಜನಿಕ ಗಣೇಶ ಉತ್ಸವ, ಶಿವಾಜಿ ಉತ್ಸವಗಳನ್ನು ಪ್ರಾರಂಭಿಸಿದರು. ಇದರ ಪರಿಣಾಮ ಎಷ್ಟು ಎಂಬುದನ್ನು ಈಗಲೂ ನಾವು ನೋಡುತ್ತಿದ್ದೇವೆ. ಗಣೇಶ ಉತ್ಸವಗಳಂತೂ ಜನರು ಬೆರೆಯಲು ದೊಡ್ಡ ವೇದಿಕೆಯನ್ನೇ ಒದಗಿಸಿಕೊಟ್ಟಿತು.

ತಿಲಕರು, ಅನೇಕ ಕ್ರಾಂತಿಕಾರಿಗಳಿಗೆ ಗುರುಗಳಾಗಿದ್ದರು. ವೀರ ಸಾವರ್ಕರರೇ ಮೊದಲಾದ ಮಹಾರಾಷ್ಟ್ರದ ಮತ್ತು ಸಮಕಾಲೀನ ಭಾರತದ ಬಹುತೇಕ ಕ್ರಾಂತಿಕಾರಿಗಳು ತಿಲಕರಿಂದ ಪ್ರಭಾವಿತರಾದವರೇ. ದೆಹಲಿಯ ವೈಸರಾಯ್ ಮೇಲೆ ಬಾಂಬೆಸೆದ ಖುದೀರಾಮನನ್ನು ನೇಣಿಗೇರಿದ ಕ್ರಮವನ್ನು ಖಂಡಿಸಿ ಕೇಸರಿ ಪತ್ರಿಕೆಯಲ್ಲಿ ಬರೆದಾಗ, ತಿಲಕರನ್ನೂ ಸರ್ಕಾರದ ವಿರೋಧ ಮಾಡಿದ್ದಕ್ಕಾಗಿ, ಮಾಂಡಲೆ ಜೈಲಿನಲ್ಲಿ 6 ವರ್ಷಗಳ ಶಿಕ್ಷೆ ವಿಧಿಸಲಾಯಿತು. ಆರು ವರ್ಷಗಳ ನಂತರ ಮರಳಿದ ತಿಲಕರು, ಮತ್ತೆ ಮೇಲೆದ್ದು ಹೋಮ್ ರೂಲ್ ಲೀಗ್ ಚಳುವಳಿಯನ್ನು ಆರಂಭಿಸಿದರು. ಗಾಂಧೀಜಿಯವರು ತಮ್ಮ ರಾಜಕೀಯ ಗುರು ಗೋಖಲೆ ಎಂದು ಹೇಳಿಕೊಂಡಿದ್ದರೂ, ತಿಲಕರ ಅನೇಕ ವಿಚಾರಗಳು ಗಾಂಧೀಜಿಯರ ನಡೆಗಳಲ್ಲಿ ಕಂಡುಬರುತ್ತಿತ್ತು. ವಾಸ್ತವಿಕ ಇತಿಹಾಸವನ್ನು ನೋಡುವುದಾದರೆ, ಗಾಂಧೀಜಿಯವರಿಗೆ ಆ ಮಟ್ಟಿಗಿನ ಜನ ಬೆಂಬಲ ಸಿಗಲು, ಜನರಲ್ಲಿ ಮೊದಲೇ ರಾಷ್ಟ್ರಪ್ರೇಮದ ಬೀಜವನ್ನು ಬಿತ್ತಿದ್ದು ತಿಲಕರೇ.

ಹೀಗೆ, ಸ್ವಾತಂತ್ರ್ಯ, ಸಮಾಜಸುಧಾರಣೆ, ಶಿಕ್ಷಣ, ಪತ್ರಿಕೋದ್ಯಮ, ಕ್ರಾಂತಿ – ಎಲ್ಲ ಕ್ಷೇತ್ರಗಳಲ್ಲಿಯೂ ಅವರು ಧ್ಯಾನಿಸಿದ್ದು ಭಾರತ ಮಾತೆಯನ್ನೇ, ಬಯಸಿದ್ದು ರಾಷ್ಟ್ರದ ಉತ್ಥಾನವನ್ನೇ. ಸ್ವತಃ ಶಿಕ್ಷಕರಾಗಿದ್ದ ತಿಲಕರಿಗೆ, ಒಬ್ಬರು "ಸ್ವಾತಂತ್ರ್ಯದ ನಂತರ ತಮ್ಮ ಕೆಲಸವೇನು ?" ಎಂದು ಕೇಳಿದಾಗ, "ಮತ್ತೆ ಶಾಲೆಯಲ್ಲಿ ಬೋಧಿಸಲು ಆರಂಭಿಸುತ್ತೇನೆ" ಎಂದ ಅವರ ವೃತ್ತಿನಿಷ್ಠೆ ಮತ್ತು ವಿದ್ಯಾರ್ಥಿಗಳ ಬಗೆಗಿನ ಕಾಳಜಿ ಅನುಕರಣೀಯ.

"ಭಾರತವೇ ನನ್ನ ಜನ್ಮಭೂಮಿ ಮತ್ತು ದೇವತೆ. ಭಾರತದ ಜನರೇ ನನ್ನ ಬಂಧು-ಬಳಗ. ಅವರ ಸರ್ವಾಂಗೀಣ ಅಭಿವೃದ್ಧಿಗಾಗಿ, ಪ್ರಾಮಾಣಿಕ ಪ್ರಯತ್ನ ಮಾಡುವುದೇ ನನ್ನ ಪರಮೋಚ್ಚ ಧರ್ಮ ಮತ್ತು ಕರ್ತವ್ಯ" – ಎಂದು ಉಸುರಿದ ತಿಲಕರ ದೇಶಾಭಿಮಾನ ನಮ್ಮಲ್ಲೂ ಸ್ಫುರಿಸಲಿ.

**ವಂದೇ ಮಾತರಂ.**

➢ ಪುಟ 3 ರಿಂದ..... ಸಂಸ್ಕೃತ ದೀಪ ಬೆಳಗಲಿ...

ಎದೆ ಉಬ್ಬಿಸಿ ಜಗತ್ತಿನ ಜನಾಂಗಕ್ಕೆ ತಿಳಿಸಲು ನಾಚಿಕೆಪಡಬೇಕು. ಒಂದು ಕಾಲದಲ್ಲಿ ಭಾರತ ಜಗದ್ಗುರುವಾಗಿ ಮೆರೆದದ್ದು ಭಾರತದ ಪ್ರಾಚೀನ ಸಂಸ್ಕೃತ ಭಾಷೆಯ ಕಾರಣದಿಂದ ಅಂತ ಹೇಳಿಕೊಳ್ಳಲು ಸಂಕೋಚ ಪಡಬೇಕೆ ?

ಸ್ವಾಮಿ ವಿವೇಕಾನಂದರಂತಹ ಶ್ರೇಷ್ಠ ಸಂತ ಮಹಾಂತರು ವಿಶ್ವವೇದಿಕೆಯಲ್ಲಿ ಪ್ರತಿಪಾದಿಸಿದ್ದು ವೇದ, ಉಪನಿಷತ್, ವೇದಾಂತಾದಿ ವಿಚಾರಗಳನ್ನೇ. ಯೋಗ, ಆಧ್ಯಾತ್ಮ, ಸಂಸ್ಕೃತದ ಜ್ಞಾನಸಂಪಾದನೆಗೆ ಇಂದು ಜಗತ್ತಿನ ನೂರಾರು ದೇಶಗಳು ತುದಿಗಾಲಲ್ಲಿ ನಿಂತಿವೆ. ಲಕ್ಷಾಂತರ ಜನರು ಭಾರತಕ್ಕೆ ಪ್ರತಿವರ್ಷ ಈ ಉದ್ದೇಶಕ್ಕಾಗಿ ಭೇಟಿ ನೀಡಿ ಅಧ್ಯಯನ ನಿರತರಾಗಿದ್ದಾರೆ. ಇಂತಹ ಸನ್ನಿವೇಶದಲ್ಲಿಯಾದರೂ ನಾವು ಯೋಚಿಸಿ ಮುಂದಡಿ ಇಡಬೇಕಲ್ಲವೇ ? ನಮ್ಮ ಸಮಾಜದಲ್ಲಿ ಕಂಡು ಬರುತ್ತಿರುವ ಭಾಷಾ ಭೇದ, ಜಾತಿ ಭೇದ, ಉಚ್ಚ ನೀಚ ಭೇದವನ್ನು ನಿವಾರಿಸಿ ನಾವೆಲ್ಲರು ಒಂದು ವಿಶಾಲ ಸಮಾಜದ ಅಂಗಗಳು ಎನ್ನುವ ಭಾವನೆಯನ್ನು ರೂಪಿಸಿ ಭಾಷಾ ಸಾಮರಸ್ಯವನ್ನು, ಸಾಮಾಜಿಕ ಸಾಮರಸ್ಯವನ್ನು, ರಾಷ್ಟ್ರೀಯ ಭಾವೈಕ್ಯತೆಯನ್ನು ತರುವ ನಿಟ್ಟಿನಲ್ಲಿ ಭಾರತದ ಯೋಗ, ಅಧ್ಯಾತ್ಮ, ಸಂಸ್ಕೃತವನ್ನು ವಿನೀತಭಾವದಿಂದ ಸ್ವೀಕರಿಸಿ ಮುಂದಡಿ ಇಡೋಣ.

ಇವುಗಳೇ ಮುಂದಿನ ದಿನಗಳಲ್ಲಿ ನಮ್ಮ ಯುವಜನಾಂಗಕ್ಕೆ ದಾರಿದೀಪವಾಗಬಲ್ಲವು. ಅದಕ್ಕಾಗಿ ನಮ್ಮವರ ಮನಸ್ಸುಗಳನ್ನು ಮತ್ತು ಮನೆ-ಮನೆಗಳನ್ನು ಈ ದಿಕ್ಕಿನಲ್ಲಿ ಸಜ್ಜುಗೊಳಿಸುವ ಕಾರ್ಯ ಇಂದು ಆಗಬೇಕು. ನಮ್ಮ ಜೀವನ, ಮನೆ, ಶಿಕ್ಷಣ ಕೇಂದ್ರಗಳು ನಮ್ಮ ಸಾಂಸ್ಕೃತಿಕ ಪರಂಪರೆಯ ಅಧ್ಯಯನದ ನೆಲೆವೀಡಾಗಬೇಕು. ಆಗ ಮಾತ್ರ ನಾವಂದುಕೊಂಡ ರಾಷ್ಟ್ರವನ್ನು ಕಟ್ಟಲು ಸಾಧ್ಯ. ಇಂದಿನ ವಿಕಾಸ ಪ್ರಕ್ರಿಯೆಯು ಈ ದೃಷ್ಟಿಯನ್ನು ಹೊಂದಿದಾಗ ಮಾತ್ರ 'ವಿಶಾಲೋಯಂ ದೇಶಃ ವಿಕಸಿತೋಯಂ ದೇಶ'ವಾಗಲು ಸಾಧ್ಯ. ●

## ರಾಷ್ಟ್ರಾರಾಧಕ ಗೋಪಾಲ ಕೃಷ್ಣ ಗೋಖಲೆ ಅವರ ಜೀವನ ಸಂದೇಶ

1. ನಾವು ಮೊತ್ತ ಮೊದಲು ಭಾರತೀಯರಾಗಿರಬೇಕು. ಮಿಕ್ಕೆಲ್ಲ ಸಂಗತಿಗಳು ಆಮೇಲಿನವು.
2. ಸಾರ್ವಜನಿಕ ಜೀವನದಲ್ಲಿರುವವರಿಗೆ ಕರ್ತವ್ಯ ಪ್ರಜ್ಞೆ ಆದ್ಯತೆಯ ವಿಷಯವಾಗಿರಬೇಕು. ಯಾವುದೇ ಸ್ವಂತ ಪ್ರಯೋಜನದ ಲೆಕ್ಕಾಚಾರಗಳು ಇರಬಾರದು.
3. ಶಿಕ್ಷಣದಿಂದ ಜೀವನ ದಕ್ಷತೆಯು ಪ್ರಾಪ್ತವಾಗುತ್ತದೆ.
4. ಚಿಂತನೆ, ನುಡಿ, ನಡತೆ- ಈ ಮೂರರ ನಡುವೆ ಸಾಂಗತ್ಯವಿರಬೇಕು.

# ಬಾ ಬಾಲೆ ಶಾಲೆಗೆ



ಬಾ ಬಾಲೆ ಶಾಲೆಗೆ
ಓದು ಬರಹ ಕಲಿಯಲು
ಸುಶಿಕ್ಷಿತೆ ಎನಿಸಿಕೊಂಡು
ಬದುಕಿ ನೀನು ಬಾಳಲು ॥

ಪುರುಷರಂತೆ ಹಕ್ಕಿದೆ
ಎಂಬುದು ತಿಳಿಯ ಬೇಕಿದೆ
ಸ್ಥಾನಮಾನ ಕೀರ್ತಿ ಘನತೆ
ಪಡೆದು ಬಾಳಬೇಕಿದೆ ॥

ಊಟ ಬಟ್ಟೆ ಬರೆಗಳನ್ನು
ಶಾಲೆಯಲ್ಲಿ ಕೊಡುವೆವು
ಆಟ- ಪಾಠ ಕಥೆ ಹಾಡು
ತಿಳಿಸಿ ನಿನಗೆ ಹೇಳುವೆವು ॥

ಹೊಸ ಯೋಜನೆಗಳ ಕಲಿಕೆಯಂತೆ
ತಿದ್ದಿ ಹೇಳುವೆ ಕಷ್ಟವಾಗದಂತೆ
ವಿದ್ಯೆಕಲಿ ನೀ ನಿಷ್ಠೆಯಿಂದ
ಸಾರ್ಥಕಗೊಳಿಸು ಜ್ಞಾನ ಹುಂಡಿಯಿಂದ ॥

ತಪ್ಪದೆ ಬಾ ಜ್ಞಾನ ದೇಗುಲಕೆ
ಓದು ಕಲಿತು ಮುದನೀಡು ಮನಕೆ
ಬಂದು ಸೇರಿಕೊಳ್ಳು ಬೇಗ
ದಾರಿ ತೋರುವ ಶಾಲೆಗೆ ॥

ಬೇಗ ಬಾ ಬಾಲೆಯೆ
ತಡವು ಏಕೆ ಈಗಲೇ?
ಓದು- ಬರಹ ಕಲಿತು ನೀನು
ಜಾಣೆ ಆಗು ಬಾಲೆನೀ ॥



ವಿದ್ಯಾವತಿ ಆರ್. ಜನವಾಡೆ
ರಾಜ್ಯ ಪ್ರಶಸ್ತಿ ವಿಜೇತರು
ಚಿಕ್ಕೋಡಿ

# ಪ್ರತಿಭಾ ಪುರಸ್ಕಾರ

ದಿನಾಂಕ 24–07–2016 ರ ಭಾನುವಾರ ಬೆಳಗ್ಗೆ 10 ಗಂಟೆಗೆ ಬೆಂಗಳೂರು ಉತ್ತರ ಜಿಲ್ಲೆಯ 31 ನೇ ವರ್ಷದ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಏರ್ಪಡಿಸಿದೆ. ಸಮಾಜ ಸೇವಕರಾದ ಶ್ರೀ ಮಹೇಂದ್ರರವರು, ವಿಂಗ್ ಕಮಾಂಡರ್ ಶ್ರೀ ಆರ್. ತಿರುಮಲಾಚಾರ್ ಹಾಗೂ ವಿಂಗ್ ಕಮಾಂಡರ್ ಶ್ರೀ ರಾಜೀವ್ ಕುಮಾರ್‌ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಶಾಸಕರಾದ ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ಅಧ್ಯಕ್ಷತೆ ವಹಿಸುವರು. ಸಮಾರಂಭ ನಡೆಯುವ ಸ್ಥಳ – ರಾಜಾಜಿನಗರ ಪೋಷಕರ ಸಂಘದ ಸಭಾಂಗಣ, ರಾಜಾಜಿನಗರ, ಬೆಂಗಳೂರು–10.


ದಿನಾಂಕ 7–8–2016 ರ ಭಾನುವಾರ ಬೆಳಗ್ಗೆ 10 ಗಂಟೆಗೆ ಬೆಂಗಳೂರು ದಕ್ಷಿಣ ಜಿಲ್ಲೆಯ 31 ನೇ ವರ್ಷದ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಆಯೋಜಿಸಿದೆ. ಸಮಾರಂಭದ ಮುಖ್ಯ ಅತಿಥಿಗಳಾಗಿ ದೂರದರ್ಶನದ ಮಹಾನಿರ್ದೇಶಕರಾದ ನಾಡೋಜ ಡಾ. ಮಹೇಶ್ ಜೋಶಿಯವರು ಹಾಗೂ ಖ್ಯಾತ ನ್ಯಾಯವಾದಿಗಳಾದ ಶ್ರೀಮತಿ ಸುಶೀಲಾ ದೇವಿ ರಾಮಚಂದ್ರರವರು ಪಾಲ್ಗೊಳ್ಳಲಿದ್ದಾರೆ. ಸಮಾರಂಭ ನಡೆಯುವ ಸ್ಥಳ : ರಾಷ್ಟ್ರೀಯ ವಿದ್ಯಾಲಯ ಶಿಕ್ಷಕರ ಕಾಲೇಜು ಸಭಾಂಗಣ, ಜಯನಗರ, ಬೆಂಗಳೂರು–11.

**ಸಮಾರಂಭಗಳಿಗೆ ತಮಗೆ ಆತ್ಮೀಯ ಸ್ವಾಗತ**

# ಪದಬಂಧ

## ವಿದ್ಯಾರ್ಥಿ ಮಿತ್ರ – 26

– ವಿ. ರಾಜ, ಅಧ್ಯಾಪಕರು,
ನ್ಯಾಷನಲ್ ಹೈಸ್ಕೂಲ್, ಬೆಂಗಳೂರು




**ಎಡದಿಂದ ಬಲಕ್ಕೆ**

1. ಕಂಪ್ಯೂಟರ್ ಅನ್ನು ಹೀಗೂ ಹೇಳಬಹುದು (3)
3. ಇದು ಸುವಾಸನೆಯುಳ್ಳ ತಾವರೆ (3)
4. ಮತಿ ಭ್ರಮಣೆ ತಿರುಗಿದೆ (3)
5. ಬದಿಯಲ್ಲಿ ಬೆಳೆದ ತರಕಾರಿ (3)
6. ತರತರ ಎಂದು ಮೇಲಕ್ಕೇರಿದೆ (3)
8. ಎಲ್ಲ ಬಲ್ಲ ಗಂಡ (3)
10. ಗಣಿಯಲ್ಲಿನ ಲೆಕ್ಕಾಚಾರ (3)
11. ಮಣಭಾರದ ಪತಿ (3)
12. ಇವನು ತಿಳಿದವನು (3)
13. ಪಸರಿಸುವ ಗಾಳಿ (3)

**ಮೇಲಿಂದ ಕೆಳಕ್ಕೆ**

2. ಸ್ವಲ್ಪ ಸ್ವಲ್ಪವೇ ಕಲ್ಪವನ್ನೇರಿದ ಊಹೆ (3)
3. ಕವಿ ಬರೆದ ಕವನಾ (3)
5. ದೀನ ಬರಡಾಗಿದ್ದಾನೆ (3)
7. ಕರಡಿಗೆ ರಿಯಾಯಿತಿ ಸಿಕ್ಕಿದೆ (3)
9. ಕೈಕೆಯಿಯ ಸುಪುತ್ರ (3)
10. ಗಣಗಳ ಒಡೆಯ ವಿನಾಯಕ (3)

| | | | | | | |
|---|---|---|---|---|---|---|
| 1 | | 2 | ■ | 3 | | |
| ■ | ■ | 4 | | | ■ | ■ |
| 5 | | | ■ | 6 | | 7 |
| | ■ | ■ | ■ | ■ | ■ | |
| 8 | | 9 | ■ | 10 | | |
| ■ | ■ | 11 | | | ■ | ■ |
| 12 | | | ■ | 13 | | |

## ವಿದ್ಯಾರ್ಥಿ ಮಿತ್ರ 26 ರ ಉತ್ತರ

**ಎಡದಿಂದ ಬಲಕ್ಕೆ :** 1. ಗಣಕ ; 3. ಕಮಲ ; 4. ಲ್ಪಕವಿ ; 5. ಬದನೆ ; 6. ತಾರಕ ; 8. ವಲ್ಲಭ ; 10 ಗಣಿತ ; 11. ರಮಣ ; 12. ಶಿಕ್ಷಿತ ; 13. ಪವನ

**ಮೇಲಿನಿಂದ ಕೆಳಕ್ಕೆ :** 2. ಕಲ್ಪನೆ ; 3. ಕವಿತಾ ; 5. ಬಡವ ; 7. ಕಡಿತ ; 9. ಭಾರತ ; 10. ಗಣಪ

# ಶಿಕ್ಷಕ ಸಂಘದಿಂದ ಯೋಗಶಿಕ್ಷಣ ತರಬೇತಿ





**ಬಳ್ಳಾರಿ:** ಕರ್ನಾಟಕ ರಾಜ್ಯ ಸೆಕೆಂಡರಿ ಶಿಕ್ಷಕ ಸಂಘ ಬಳ್ಳಾರಿ ತಾಲ್ಲೂಕು ಘಟಕದಿಂದ ವಿಶ್ವಯೋಗ ದಿನಾಚರಣೆ ಅಂಗವಾಗಿ ಜೂನ್ 21 ರಿಂದ ಜೂನ್ 30ರವರೆಗೆ ಹತ್ತು ದಿನಗಳ ಕಾಲ ಉಚಿತ ಯೋಗ, ಪ್ರಾಣಾಯಾಮ ಮತ್ತು ಮುದ್ರೆಗಳ ತರಬೇತಿಯನ್ನು ಸಾರ್ವಜನಿಕರಿಗೆ ನಗರದ ಬಾಲ ಭಾರತಿ ಶಾಲೆಯಲ್ಲಿ ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ನಗರದ ತಾರಾನಾಥ ಆಯುರ್ವೇದ ಆಸ್ಪತ್ರೆಯ ವೈದ್ಯರಾದ ಮಾಧವ ದಿಗ್ಗಾವಿ ಮಾತನಾಡುತ್ತಾ, ಈ ಭೂಮಿಯಲ್ಲಿ ಮನುಷ್ಯನಿಗೆ ಬದುಕುವುದಕ್ಕೆ ನೀರು, ಗಾಳಿ, ಆಹಾರ ಹೇಗೆ ಅಗತ್ಯವಾಗಿದೆಯೋ ಯೋಗವೂ ಕೂಡ ಅಷ್ಟೇ ಅವಶ್ಯವಾಗಿದೆ. ಅನೇಕ ರೀತಿಯ ಖಾಯಿಲೆಗಳನ್ನು ಯೋಗದಿಂದ ಗುಣಪಡಿಸಬಹುದಾಗಿದೆ. ಸಾಕಷ್ಟು ರೋಗಿಗಳಿಗೆ ಯೋಗ ಪ್ರಾಣಾಯಾಮ, ಧ್ಯಾನ ಮಾಡುವುದನ್ನು ಪರಿಣತಿ ಪಡೆದ ಯೋಗ ಗುರುಗಳಲ್ಲಿ ಅಭ್ಯಸಿಸಲು ಸೂಚಿಸುತ್ತಿರುವುದಾಗಿ ವೈದ್ಯರು ತಿಳಿಸಿದರು. ಅಲ್ಲದೆ ವಾಯು ವಿಹಾರವನ್ನು ಕೇವಲ ಮುವತ್ತು ನಿಮಿಷಗಳಷ್ಟೇ ಮಾಡಬೇಕು. ಆಹಾರ ಪದಾರ್ಥಗಳನ್ನು ಯಾವ ಸಮಯದಲ್ಲಿ ಎಷ್ಟು ಪ್ರಮಾಣದಲ್ಲಿ ತೆಗೆದುಕೊಳ್ಳಬೇಕು ಎಂಬುದನ್ನು ತಿಳಿಸಿದರಲ್ಲದೆ ಗೋಧಿ ಆಹಾರ ನಮ್ಮ ರಾಜ್ಯಕ್ಕೆ ಹೊಂದುವ ಆಹಾರವಲ್ಲ. ಇದರಲ್ಲಿ ಸಾಕಷ್ಟು ಸಕ್ಕರೆ ಅಂಶ ಮತ್ತು ಕ್ಯಾನ್ಸರ್‌ಕಾರಕ ಅಂಶಗಳಿರುವುದು ಇತ್ತೀಚೆಗೆ ಪತ್ತೆಯಾಗಿದೆ. ರಾಗಿ, ಸಜ್ಜೆ, ನವಣೆ, ಕೆಂಪು ಅಕ್ಕಿಯನ್ನು ಹೆಚ್ಚಾಗಿ ಬಳಸುವುದು ಉತ್ತಮ. ಉಪಾಹಾರ ಸೇವಿಸುವುದು ನಮ್ಮ ಸಂಸ್ಕೃತಿಯಲ್ಲ. ಇದು ಪಾಶ್ಚಾತ್ಯ ಸಂಸ್ಕೃತಿ. ಉಪಾಹಾರ ಎಂದರೆ ಬೆಳಗಿನ ಆರರಿಂದ ಏಳು ಗಂಟೆಯೊಳಗೆ ತೆಗೆದುಕೊಳ್ಳುವುದು. ಬೆಳಗಿನ ಎಂಟು ಗಂಟೆಯ ನಂತರ ತೆಗೆದುಕೊಳ್ಳುವುದೆಲ್ಲಾ ಊಟವೆಂದೇ ಅರ್ಥ. ಇಡ್ಲಿಯಲ್ಲಿ ಬಳಸುವ ಉದ್ದು ಸಾಕಷ್ಟು ಎಣ್ಣೆ ಅಂಶದಿಂದ ಕೂಡಿರುತ್ತದೆ. ಚಪಾತಿ, ದೋಸೆ, ವಡೆ, ಪೂರಿಗಳನ್ನು ವ್ಯರ್ಜಿಸಿ ರಾಗಿಗಂಜಿ, ರಾಗಿ ದೋಸೆ, ರಾಗಿ ಮುದ್ದೆ ಮತ್ತು ಹೆಚ್ಚಿನ ಪ್ರಮಾಣದಲ್ಲಿ ಹಸಿರು ತರಕಾರಿ, ಸೌತೆ, ಕ್ಯಾರೆಟ್‌ಗಳನ್ನು ಬಳಸುವಂತೆ ಸಲಹೆ ನೀಡಿದರು. ಸಂಜೆ ಏಳು ಗಂಟೆಗೆಲ್ಲಾ ಊಟಮಾಡಿ ಹತ್ತು ಗಂಟೆಗೆ ಮಲಗುವುದು. ಬೆಳಗ್ಗೆ ಬೇಗನೇ ಎದ್ದು ವಾಯುವಿಹಾರ, ಯೋಗ, ಧ್ಯಾನ ಮಾಡುವುದರಿಂದ ಆರೋಗ್ಯವನ್ನು ಸುಧಾರಿಸಬಹುದೆಂದರು. ಶಿಬಿರಾರ್ಥಿಗಳ ಸಾಕಷ್ಟು ಪ್ರಶ್ನೆಗಳಿಗೆ ಉತ್ತಮವಾಗಿ ಉತ್ತರಿಸಿದರು.

ಯೋಗ, ಪ್ರಾಣಾಯಾಮ ಹಾಗೂ ಮುದ್ರೆಗಳ ಉಚಿತ ತರಬೇತಿ ಶಿಬಿರದ ಹತ್ತನೇ ದಿನದಂದು ಮುಖ್ಯ ಅತಿಥಿಗಳು ಹಾಗೂ ಶಿಬಿರಾರ್ಥಿ, ಬಳ್ಳಾರಿ ಜಿಲ್ಲಾ ಪಂಚಾಯ್ತಿಯ ಮಾಜಿ ಅಧ್ಯಕ್ಷರಾದ ರಾಮಲಿಂಗಪ್ಪ ಮಾತಾನಾಡಿ ಪ್ರತಿನಿತ್ಯ ಯೋಗ ಮಾಡುವವರು ಆಗಾಗ ನಡೆಯುವ ಇಂತಹ ಶಿಬಿರಗಳಲ್ಲಿ ಭಾಗವಹಿಸುವುದರಿಂದ ಅನೇಕ ರೀತಿಯ ಬದಲಾವಣೆಯ ಹಂತಗಳನ್ನು ಪುನಃ ಮನನ ಮಾಡಬಹುದಾಗಿದೆ. ಶಿಕ್ಷಕರ ಸಂಘ ಸಾಮಾಜಿಕ ಕಳಕಳಿ ಬಿಂಬಿಸುವಂತಹ ಕಾರ್ಯಕ್ರಮ ಹಮ್ಮಿಕೊಂಡಿದ್ದು ನಿಜಕ್ಕೂ ಶ್ಲಾಘನೀಯ ಎಂದರಲ್ಲದೇ "ಯೋಗದಿಂದ ರೋಗ ದೂರ" ಎಂಬ ನಾಣ್ನುಡಿ ಸತ್ಯವಾದದ್ದು. ಯೋಗ, ಪ್ರಾಣಾಯಾಮ, ಧ್ಯಾನ, ಮುದ್ರೆಗಳಿಂದ ದೇಹದಲ್ಲಿ ಬಳಲಿಕೆ, ಆಯಾಸ ದೂರವಾಗಿ ನವಚೈತನ್ಯ ಮೂಡುತ್ತದೆ ಎಂದರು.

ಕರ್ನಾಟಕ ರಾಜ್ಯ ಸೆಕೆಂಡರಿ ಶಿಕ್ಷಕ ಸಂಘ ಬಳ್ಳಾರಿ ತಾಲ್ಲೂಕು ಘಟಕದ ಅಧ್ಯಕ್ಷರೂ ಶಿಬಿರದ ಯೋಜಕರೂ ಆದ ಯು. ರಮೇಶ್ ಮಾತನಾಡಿ ಮನೆಯಲ್ಲಿ ಮಹಿಳೆಯರು ಆರೋಗ್ಯವಾಗಿದ್ದರೆ ಆ ಕುಟುಂಬದ ಸದಸ್ಯರೆಲ್ಲರೂ ಆರೋಗ್ಯವಾಗಿರುತ್ತಾರೆ. ಬಹಳ ಚಟುವಟಿಕೆಯಲ್ಲಿರುತ್ತಾರೆ. ಒಂದು ವೇಳೆ ಆ ಮಹಿಳೆಗೆ ಖಾಯಿಲೆ ಏನಾದರೂ ಕಂಡರೆ ಇಡೀ ಕುಟುಂಬ ಚಡಪಡಿಸುತ್ತದೆ. ಊಟ, ಉಪಾಹಾರ ಮನೆಗೆಲಸದ ಬಗ್ಗೆ ಚಿಂತೆಗೀಡಾಗುತ್ತಾರೆ. ಮಹಿಳೆಯರ ಮನಸ್ಸಿಗೆ ಏಕಾಗ್ರತೆ, ಯೋಗ, ಧ್ಯಾನ, ಮುದ್ರೆಗಳು ತುಂಬಾ ಅವಶ್ಯಕವಾಗಿದೆ. ಈ ತರಬೇತಿಯಲ್ಲಿ ತಾವು ಅಭ್ಯಸಿಸಿದಂತೆ ಮನೆಯಲ್ಲಿ ಒಂದು ತಾಸು ಯೋಗಕ್ಕಾಗಿ ಮೀಸಲಾಗಿಡಿ ಎಂದು ತಿಳಿಸಿದರು.

ತರಬೇತಿದಾರರು ಹಾಗೂ ಸಂಘದ ಜಿಲ್ಲಾಧ್ಯಕ್ಷರಾದ ಎ. ಗುಂಡಾಚಾರ್ ಪ್ರಾಣಾಯಾಮ ಮತ್ತು ಯೋಗ ತರಬೇತಿಯ ಸಂದರ್ಭದಲ್ಲಿ ಡಿ.ವಿ.ಜಿ. ಯವರ ಮಂಕುತಿಮ್ಮನ ಕಗ್ಗ, ಬಸವಣ್ಣನವರ ವಚನಗಳು, ವಿವೇಕಾನಂದರ ನುಡಿಮುತ್ತುಗಳು, ದೇಶಭಕ್ತಿ ಗೀತೆಗಳನ್ನು ಹೇಳುತ್ತಾ ತಮ್ಮ ಸಾಹಿತ್ಯ ಜ್ಞಾನದೊಂದಿಗೆ ಯೋಗ, ಯೋಗಶಕ್ತಿ ಪ್ರಾಣಾಯಾಮದ ಮಹತ್ವವನ್ನು, ಅವುಗಳ ಅನುಸರಣೆಯ ಪ್ರಭಾವದೊಂದಿಗಿನ ಜೀವನ ಶೈಲಿಯನ್ನು ಪ್ರತಿಬಿಂಬಿಸಿದರಲ್ಲದೆ ಮಧ್ಯೆ ಮಧ್ಯೆ ನಗೆ ಚಟಾಕಿಗಳನ್ನು ಹಾರಿಸುತ್ತಾ ಶಿಬಿರಾರ್ಥಿಗಳ ಮನಗೆದ್ದರು.

ಮುಂದಿನ ಪುಟಕ್ಕೆ...

Registered No. RNI 45459/85 RNP/KA/BGS-125/2015-2017 Posted at Bangalore PSO Bangalore -560 026
Date of Posting 20th or 21st of every month



ಹಿಂದಿನ ಪುಟದಿಂದ...

ಮುದ್ರೆಗಳ ತರಬೇತುದಾರರು ಹಾಗೂ ಅಲ್ಲೀಪುರ ಪ್ರೌಢಶಾಲೆಯ ಮುಖ್ಯ ಗುರುಗಳಾದ ಮಲ್ಲಿಕಾರ್ಜುನ ಗೌಡರು ಹತ್ತು ದಿನಗಳ ಕಾಲ ನಡೆದ ಈ ಶಿಬಿರದಲ್ಲಿ ಶಿಬಿರಾರ್ಥಿಗಳಿಗೆ ವಿವಿಧ ರೀತಿಯ ಮುದ್ರೆಗಳಾದ ಕುಚೇರ, ಧನ್ವಂತರ, ಪ್ರತ್ಯಂಗೀರ ಮುದ್ರೆ, ಜ್ಞಾನ, ಧ್ಯಾನ, ಲಿಂಗ ಮುದ್ರೆಗಳು ಮತ್ತು ಆಯಾ ಮುದ್ರೆಗಳನ್ನು ಮಾಡುವಾಗ ಪಠಿಸುವ ಮಂತ್ರ ಮತ್ತು ಅವುಗಳ ಪ್ರಯೋಜನ ಮತ್ತು ಆಸನಗಳ ಕುರಿತಾಗಿ ಸಾಕಷ್ಟು ಮಾಹಿತಿಗಳನ್ನು ಒದಗಿಸುತ್ತಾ ಸುಲಭವಾಗಿ ಮುದ್ರೆಗಳನ್ನು ಮಾಡುವ ವಿಧಾನವನ್ನು ತಿಳಿಸಿದರು.

ಶಿಬಿರ ನಡೆದ ಹತ್ತು ದಿನವೂ ಸುಮಾರು 70ರಿಂದ 80 ರಷ್ಟು ಶಿಬಿರಾರ್ಥಿಗಳು ಭಾಗವಹಿಸಿದ್ದು, ಈ ಶಿಬಿರದಲ್ಲಿ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದು ವಿಶೇಷವಾಗಿತ್ತು. ತರಬೇತುದಾರರಾದ ಎ. ಗುಂಡಾಚಾರ್ ಹಾಗೂ ಮಲ್ಲಿಕಾರ್ಜುನ ಗೌಡರಿಗೆ ಶಿಬಿರಾರ್ಥಿಗಳೇ ಒಮ್ಮನಸ್ಸಿನಿಂದ ಸನ್ಮಾನಿಸಿ ಗೌರವಿಸಿದರು. ತರಬೇತಿಯ ಬಗ್ಗೆ ನಿವೃತ್ತ ಉಪನ್ಯಾಸಕರಾದ ಮಲ್ಲಣ್ಣ ಮತ್ತು ಮಹಿಳಾ ಶಿಬಿರಾರ್ಥಿಗಳು ತಮ್ಮ ಅಭಿಪ್ರಾಯವನ್ನು ಹಂಚಿಕೊಂಡರು. ಕಿತ್ತೂರು ರಾಣಿ ಚನ್ನಮ್ಮ ಪ್ರೌಢಶಾಲೆಯ ಮುಖ್ಯ ಗುರುಗಳು ಹಾಗೂ ಸಂಘದ ಮಹಿಳಾ ಪ್ರಮುಖರಾದ ಕುಮುದಿನಿ ವಂದಿಸಿದರು.

**ವರದಿ : ಯು. ರಮೇಶ್**
**ಬಳ್ಳಾರಿ ತಾಲ್ಲೂಕು ಘಟಕದ ಅಧ್ಯಕ್ಷರು**

**IF UNDELIVERED**
**PLEASE RETURN TO SENDER**

**Published for K.S.S.T.A. by K. Narahari**
**# 55, Yadavasmruthi, 1st Main, Sheshadripuram**
**Bangalore-560020. ✆ : 060-23466495**
**Printed at : RASHTROTTHANA MUDRANALAYA**
**Bangalore - 560 019.**

**ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ**

**D.P.I. (Special) ಅವರ ಆದೇಶ ಸಂಖ್ಯೆ T3-LBS-RKM-7/79-80 ದಿನಾಂಕ 20–6–1980ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (I.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲು ನಿಧಿಯಿಂದ 'ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ' ಚಂದಾ ಪಾವತಿ ಮಾಡಬಹುದು**

srushtidesigns@gmail.com